# ಮಹಾಕಾವ್ಯಗಳು


ಸಂಪಾದಕರು

ವೇದರತ್ನ, ವೇದವಾರಿಧಿ, ಸಾಮಗಾನಚತುರ ಆಸ್ಥಾನ ವಿದ್ವಾನ್

**ವೇ॥ಬ್ರ॥ಶ್ರೀ॥ ವಿದ್ವಾನ್ ಕೆ.ಆರ್. ಮಂಜುನಾಥ ಶ್ರೌತೀ**



**ಪ್ರಕಾಶಕರು**

ಅವಧೂತ ದತ್ತ ಪೀಠಮ್

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ

ಮೈಸೂರು - 570025 ಫೋನ್ - 2486486

**ಅ**ರಿವಿನರಸಿ ಆಗಮಿಪ ಭಕುತರಿಗೆ

**ಪಾ**ರಮಾರ್ಥದ ಆಶೀರ್ವಾದದೊಂದಿಗೆ

**ಜಿ**ತೇಂದ್ರಿಯರನ್ನಾಗಿಸಿ ಸಲಹುತಿರುವಗೆ

ಅಪ್ಪಾಜಿಯೆಂಬ ಅಭಿದಾನದಿಂ ಶೋಭಿತರಿಗೆ



**ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಪಾದ ಕಮಲಗಳಿಗೆ**

**ಮಂಜುನಾಥ ಶ್ರೌತಿಯ ಭಕ್ತಿಪೂರ್ವಕ ಸಮರ್ಪಣೆ**

**ಶ್ರೀ** ಪ್ರತೀತ ಶ್ರೀ ಪ್ರದಾಯಕರು

**ಗ**ಣಾಧಿಪನಂತೆ ಗೇಯರು

**ಣ**ಕ್ಕಾರ ನಾದ ರೂಪರು

**ಪ**ತಿತ ಪಾವನ ಪಾದರು

**ತಿ**ಲಕ ಜ್ಞಾನ ಸದೃಶರು

**ಸ**ದಾನಂದ ಸಾಗರದಲಿ

**ಚಿ**ತ್ಸ್ವರೂಪ ದರುಶನದಿಂ

**ದಾ**ಸಶ್ರೇಷ್ಠ ಪ್ರತಿಭೆಯಿಂ

**ನಂ**ದದ ಶಕ್ತಿ  ಸ್ವರೂಪದಿಂ

**ದ**ಮಾದಿ ಗುಣ ಶೋಭಿತರು

**ಸ್ವಾ**ನುಭವಂ ಸಕಲರಿಗೂ ಸಾದೃಶಿಸಿ

**ಮೀ**ರಿ ನಿಂತಿಹರು ಧೃವತಾರೆಯಾಗಿ

**ಜಿ**ತೇಂದ್ರಿಯರನ್ನಾಗಿಸಲು ಎಲ್ಲರಂ

# ಮಹಾಕಾವ್ಯಗಳು


**ಸಂಪಾದಕರು**

**ವೇದರತ್ನ, ವೇದವಾರಿಧಿ, ಸಾಮಗಾನಚತುರ ಆಸ್ಥಾನ ವಿದ್ವಾನ್**

**ವೇ॥ಬ್ರ॥ಶ್ರೀ॥ ವಿದ್ವಾನ್ ಕೆ.ಆರ್. ಮಂಜುನಾಥ ಶ್ರೌತೀ**



**ಪ್ರಕಾಶಕರು**

ಅವಧೂತ ದತ್ತ ಪೀಠಮ್

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ

ಮೈಸೂರು - 570025 ಫೋನ್ - 2486486

ಪ್ರತಿಗಳು - 500

ಪ್ರಥಮ ಮುದ್ರಣ - 2012

ಮುದ್ರಕರು

ಮಾ ಪ್ರಿಂಟ್ಸ್, ಬೆಂಗಳೂರು

ಪ್ರಾಪ್ತಿ ಸ್ಥಾನ

ರಾಗರಾಗಿಣೀ ಟ್ರಸ್ಟ್

ಶ್ರೀಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು 570025

0821 2486486

# ವಿಷಯ ಸೂಚಿಕಾ


| | |
|---|---|
| ಮಂಗಳಾಶಾಸನ | **6** |
| ಮುನ್ನುಡಿ | **7** |
| ಮಹಾಕಾವ್ಯಗಳು | **9** |
| ರಾಮಾಯಣ | **15** |
| ಇತಿಹಾಸ ಸಂಸ್ಕೃತಿ | **26** |
| ಮಹಾಭಾರತ | **30** |
| ರಘುವಂಶ | **47** |
| ಕುಮಾರ ಸಂಭವ | **49** |
| ಶಿಶುಪಾಲವಧ | **52** |
| ಕಿರಾತಾರ್ಜುನೀಯ | **53** |
| ನೈಷಧೀಯ ಚರಿತ | **54** |

## ಅವಧೂತ ದತ್ತಪೀಠಾಧಿಪತಿ ಪರಮಪೂಜ್ಯ

## ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ

## ಮಂಗಳಾಶಾಸನ

**ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರ ಕ್ಷತಯೇ**

ಕಾವ್ಯ ವೆಂದರೆ ಕವಿಯ ಒಂದು ಕೃತಿ. ಸೃಷ್ಟಿಕರ್ತನ ಅಂಶದಿಂದ ಜನಿಸಿದ ಮನುಷ್ಯ ತನ್ನ ಮನೋಭಾವವನ್ನು ಅಕ್ಷರರೂಪದಲ್ಲಿ ಸಾಕ್ಷಾತ್ಕಾರಗೊಳಿಸುವುದೇ ಕಾವ್ಯ. ಇದು ಗದ್ಯ ಮತ್ತು ಪದ್ಯ ರೂಪದಲ್ಲಿರುತ್ತದೆ. ಅನೇಕಮಂದಿ ಮಹನೀಯರ ಭಾವಸ್ರೋತಗಳೇ ಅನೇಕ ಮನೋಹರ ರೂಪಗಳನ್ನು ತಾಳಿ ಕಾವ್ಯಗಳೆನಿಸಿವೆ. ಇವುಗಳಲ್ಲಿ, ಅಸಮಾನವಾದ ಶೈಲಿ ಮತ್ತು ಕಥಾ ವಸ್ತು ಪ್ರತಿಪಾದನೆ ಮಾಡುವ ಗ್ರಂಥಗಳನ್ನು ಮಹಾಕಾವ್ಯಗಳೆಂದು ಹಿರಿಯರು ಹೆಸರಿಸಿದ್ದಾರೆ. ಇಂತಹ ಕೃತಿಗಳಲ್ಲಿ ರಾಮಾಯಣವೇ ಆದ್ಯವೆಂಬುದು ಐತಿಹಾಸಿಕ ಸತ್ಯ.

ಅನೇಕ ಮಹನೀಯರು ಮಾಡಿರುವ ಈ ಕಾವ್ಯಗಳ ಪ್ರಯೋಜನ -

1. ಓದಿ, ಆಚರಿಸುವಂತೆ ಪ್ರಚೋದನೆ ಮಾಡುವುದು
2. ಅಂತಹ ಆಚರಣೆಯ ಯಶಸ್ಸು
3. ವ್ಯವಹಾರ ಜ್ಞಾನ, ಪ್ರಯೋಜನಗಳು
4. ಅಮಂಗಳವನ್ನು ತಡೆಗಟ್ಟುವುದು.

ಇಂತಹ ಪ್ರಯೋಜನಗಳನ್ನು ಉಂಟುಮಾಡುವ ಕಾವ್ಯಗಳ ಪರಿಚಯ ಮಾಡಿಸಿ, ಓದುಗರಿಗೆ ಮಹೋಪಕಾರ ಮಾಡಿದ ನಮ್ಮ ಆಸ್ಥಾನವಿದ್ವಾಂಸರಿಗೂ, ಹಾಗೂ ಪಾಠಕರಿಗೆ, ಆದಿಗುರು ದತ್ತಾತ್ರೇಯನ ಅನುಗ್ರಹವು ಅಪಾರವಾಗಿ ಲಭಿಸಲಿ. ಹಾಗೂ ಮತ್ತಷ್ಟು ಕೃತಿಗಳು ಓದುಗರಿಗೆ ದೊರೆಯಲಿ.

ಜಯ ಗುರು ದತ್ತ

# ಮುನ್ನುಡಿ

ಸಂಸ್ಕಾರಯುತ ನಮ್ಮ ಜೀವನಕ್ರಮದ ಜೊತೆಗೆ ನಮ್ಮ ಹೆಮ್ಮೆಯ ಪರಂಪರೆಯನ್ನು ಅರಿತಾಗ ಮೌಲ್ಯಗಳು ಇನ್ನಷ್ಟು ಬೆಳಗುವುವು. ನಮ್ಮ ಜೀವನ ಕ್ರಮ ಹಾಗೂ ಅರಿವಿಗೆ ವೇದವೇ ಆಧಾರ. ಸಾರ್ಥಕ ಜೀವನ ಸಾಧನೆಯೇ ಪರಮ ಗುರಿ. ಸಾಧನೆಯ ಸೋಪಾನದಲ್ಲಿ ಸಾಗಲು ತಿಳಿವಳಿಕೆಯ ಸಿರಿ ಅತ್ಯವಶ್ಯ. ವೇದಾರ್ಥವನ್ನು ಸಾಮಾನ್ಯರಾದಿಯಾಗಿ ಎಲ್ಲರೂ ಅರಿಯುವಂತಾಗಲಿ ಎಂದು ರಾಮಾಯಣ ಮಹಾಭಾರತಾದಿ ಕಾವ್ಯಗಳಲ್ಲಿ ಅದರ ಅರ್ಥವನ್ನು ವಿಸ್ತರಿಸಿದ್ದಾರೆ. ಆದಿ ಕಾವ್ಯವಾದ ರಾಮಾಯಣ ಮಹಾಕಾವ್ಯವಾದ ಮಹಾಭಾರತದ ಜೊತೆಗೆ ಇನ್ನೂ ಅನೇಕ ಕಾವ್ಯಗಳು ಭರತಖಂಡದಲ್ಲಿ ಪ್ರಕಾಶಿತವಾಗಿವೆ. ಸಾಹಿತ್ಯ ಪ್ರಪಂಚದಲ್ಲಿರುವ ಆನೇಕ ಕಾವ್ಯಗಳಲ್ಲಿ ಹತ್ತು ಕಾವ್ಯಗಳು ಪ್ರಾಮುಖ್ಯತೆಯಿಂದ ಪರಿಗಣಿತವಾಗಿವೆ.

ಅಜ್ಜ ಅಜ್ಜಿಯರಿಂದ ಕಥೆಗಳನ್ನು ಕೇಳುತ್ತಿದ್ದ ಕಾಲವು ಕ್ರಮೇಣ ಕಡಿಮೆಯಾಗುತ್ತಿದೆ. ಹಾಗಾಗಿ ಇಂದಿನ ಮಕ್ಕಳಿಗೆ ನಮ್ಮ ಪರಂಪರೆಯನ್ನು ತಿಳಿಸಿಕೊಡುವುದು ನಮ್ಮೆಲ್ಲರ ಕರ್ತವ್ಯವೇ ಆಗಿದೆ. ಈ ನಿಟ್ಟಿನಲ್ಲಿ ಕಾವ್ಯ ಪ್ರಪಂಚದ ಪರಿಚಯಕ್ಕಾಗಿ ಸ್ಥೂಲ ನಿರೂಪಣೆಯೊಂದಿಗೆ ಈ ಹೊತ್ತಿಗೆಯನ್ನು ರಚಿಸಿದ್ದೇನೆ. ಆಸಕ್ತರ ಮನದಾಹ ತಣಿಸಲೆಂದು ಆಶಿಸುತ್ತೇನೆ.

ಪರಮಪೂಜ್ಯ ಶ್ರೀ ಗಣಪತಿಸಚ್ಚಿದಾನಂದ ಮಹಾಸ್ವಾಮಿಗಳ ಭೀಮರಥೋತ್ಸವ ಸಂದರ್ಭದಲ್ಲಿ ರಚಿಸಿ ಪ್ರಕಟಿಸಲು ಆಶೀರ್ವದಿಸಿದ ಪೂಜ್ಯರ ಪಾದರವಿಂದಗಳಲ್ಲಿ ಈ ಪುಷ್ಪವನ್ನು ಸಮರ್ಪಿಸುತ್ತಿದ್ದೇನೆ.

ಈ ಪುಸ್ತಕವನ್ನು ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ವಿಜಯರಥಮಹೋತ್ಸವದ ಸಂದರ್ಭದಲ್ಲಿ ಅನಾವರಣಗೊಳಿಸಲು ಸೂಕ್ತ ಸಲಹೆಯನ್ನಿತ್ತು ಎಲ್ಲಾ ರೀತಿಯ ಸಹಕಾರವನ್ನಿತ್ತ ವಿಶಿಷ್ಠ ವಿದ್ವಾಂಸರಾದ ಬಹುವಿದ್ಯಾಕೋವಿದರಾದ **ವೇ|| ಬ್ರ|| ವಂಶೀಕೃಷ್ಣ ಘನಪಾಠಿ** ಯವರಿಗೆ ನಾನು ಅತ್ಯಂತ ಚಿರಋಣಿ. ಮುದ್ರಣ ಪೂರ್ವ ಸಹಕಾರವನ್ನಿತ್ತಿರುವ **ಶ್ರೀ ಹೆಚ್. ಎನ್. ರಾಜೇಶಶ್ರೌತೀ** ಹಾಗೂ **ಶ್ರೀ ಎಸ್. ಎಸ್ ಕಿಶೋರ್** ರಿಗೂ ಹಾಗೂ ಆಶ್ರಮದ ನಿರ್ವಾಹಕರಿಗೆ ನನ್ನ ಅನಂತ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

**ನಂದನ ಸಂವತ್ಸರ** **ಸಜ್ಜನ ವಿಧೇಯ**

**ಜ್ಯೇಷ್ಠ ಶುದ್ಧ ಏಕಾದಶೀ** **ಕೆ. ಆರ್. ಮಂಜುನಾಥ ಶ್ರೌತೀ**

**ಮೈಸೂರು.**

# ಮಹಾಕಾವ್ಯಗಳು

ವಿಶ್ವದ ಸಾಹಿತ್ಯಪ್ರಾಕಾರಗಳಲ್ಲಿ ವೇದಸಾಹಿತ್ಯವು ಬಹು ಪ್ರಾಚೀನವಾದುದು. ಕಾವ್ಯ ಇತಿಹಾಸಾದಿ ಪರಂಪರೆಗೂ ಚತುರ್ವಿಧ ಪುರುಷಾರ್ಥ ಸಿದ್ಧಿಗೂ, ನಾಟ್ಯ, ಆಯುರ್ವೇದ, ಅರ್ಥಶಾಸ್ತ್ರ, ಗಾಂಧರ್ವ ವೇದ ಮೊದಲಾಗಿ ನಾನಾ ಬಗೆಯ ವಿದ್ಯೆಗಳಿಗೆ ವೇದವೇ ಉಗಮಸ್ಥಾನ. ವೇದ ಜ್ಞಾನರಾಶಿ. ಎಲ್ಲಾ ತಿಳಿವಳಿಕೆಗೂ ಮೂಲವಾದುದು. ಭಾರತೀಯ ಪರಂಪರೆಯಲ್ಲಿ ವೇದವಾಕ್ಯವೆಂದರೆ ಸಕಲರಿಗೂ ಸರ್ವಕಾಲದಲ್ಲಿ ಪ್ರಮಾಣೀಭೂತವಾದುದು. ವೇದ ವಾಕ್ಯವೆಂದೊಡನೆ ಮರು ಚಿಂತನೆಯಿಲ್ಲದೆ, ಗೌರವ ಆದರ ಪೂರ್ವಕವಾಗಿ ನಡೆಯಬೇಕಾದ ಆದರ್ಶತೆ ಭಾರತೀಯರಿಗಿದೆ. ಕರ್ಮಕಾಂಡ ಹಾಗೂ ಜ್ಞಾನಕಾಂಡವೆಂಬ ಎರಡು ವಿಭಾಗಗಳಿಂದ ಕೂಡಿದ ವೇದವು ಈಶ್ವರ ಪ್ರಣೀತವಾದುದು. ಅಪೌರುಷೇಯ. ಋಷಿಗಳು ಇದರ ದ್ರಷ್ಟಾರರು. ವೇದದ ನಿತ್ಯತ್ವ, ಸತ್ಯತ್ವ ಹಾಗು ಪಾವಿತ್ರ್ಯವನ್ನು ಭಾರತೀಯ ಪರಂಪರೆ ಉಳಿಸಿ ಬೆಳೆಸಿದೆ.

ವೇದರಾಶಿಯನ್ನು ದ್ವಾಪರಯುಗಾಂತ್ಯದಲ್ಲಿ ಮಹಾವಿಷ್ಣುವು ಕೃಷ್ಣ ದ್ವೈಪಾಯನ ಅಥವಾ ವೇದವ್ಯಾಸನ ರೂಪದಿಂದ ಅವತರಿಸಿ ಋಗ್ವೇದ, ಯಜುರ್ವೇದ, ಸಾಮವೇದ ಹಾಗು ಅಥರ್ವವೇದವೆಂದು ನಾಲ್ಕಾಗಿ ವಿಭಾಗಿಸಿದನೆಂದು ವಿಷ್ಣುಪುರಾಣ ಸೂಚಿಸುತ್ತದೆ.

ಗುರುಶಿಷ್ಯಪರಂಪರೆಯಲ್ಲಿ, ಅವಿಚ್ಛಿನ್ನ ಅಧ್ಯಯನ ಕ್ರಮದಿಂದ ಪ್ರಾಪ್ತವಾದ ವೇದರಾಶಿಯನ್ನು ಅಂತರ್ದೃಷ್ಟಿಯಲ್ಲಿ ದರ್ಶನ ಪಡೆದು ಪ್ರಕಾಶಿಸಿದವರೇ ಋಷಿಗಳು, ವೇದವು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಾದಿ ಅನೇಕಾನೇಕ ವಿಶಿಷ್ಠ ವಿಚಾರಗಳಿಂದ ಕೂಡಿರುವುದೇ ಆಗಿದೆ. ವೇದಗಳಲ್ಲಿ ಸಂಹಿತೆ, ಆರಣ್ಯಕ ಬ್ರಾಹ್ಮಣಮೊದಲಾದ ವಿಭಾಗವಿದೆ.

ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪವೆಂಬ ಆರು ಅಂಗಗಳು ವೇದವನ್ನು ಚೆನ್ನಾಗಿ ಅಭ್ಯಸಿಸಿ ಅರ್ಥೈಸಿ ಕೊಳ್ಳಲು ಅತ್ಯಂತ ಸಹಕಾರಿ. ಇವುಗಳನ್ನು ವೇದಾಂಗಗಳೆನ್ನುತ್ತಾರೆ.

ಯಜ್ಞಗಳಲ್ಲಿ ಮಂತ್ರದ ಉಪಯೋಗ ಹಾಗೂ ವಿವರಣೆಯೂ ಗದ್ಯ ಪದ್ಯ ರೂಪದಲ್ಲಿ ಇರುವ ಭಾಗವು ಬ್ರಾಹ್ಮಣವೆನಿಸಿದೆ. ಕರ್ಮಕಾಂಡದ ವಿಸ್ತಾರ ವೈಶಿಷ್ಟ್ಯಗಳನ್ನು ಅರಿಯಲು ಬ್ರಾಹ್ಮಣ ಗ್ರಂಥಗಳು ಅತ್ಯಂತ ಅವಶ್ಯಕ. ಬ್ರಾಹ್ಮಣದಲ್ಲಿ ವಿಧಿ, ಅರ್ಥವಾದ, ಉಪನಿಷತ್ತು ಮತ್ತು ಆಖ್ಯಾನವೆಂದು ನಾಲ್ಕು ವಿಭಾಗಗಳಿವೆ. ವೇದಾರ್ಥ ಜ್ಞಾನಕ್ಕೆ ಬ್ರಾಹ್ಮಣ ಗ್ರಂಥಗಳ ಅಧ್ಯಯನ ಅತ್ಯವಶ್ಯ. ಕರ್ಮದ ಬಗ್ಗೆ ತಿಳಿವನ್ನುಂಟು ಮಾಡುವ ಬ್ರಾಹ್ಮಣಗಳ ಜೊತೆಗೆ ಜ್ಞಾನತತ್ತ್ವದ ಪರಿಷ್ಕೃತ ವಿಕಾಸ, ಚಿಂತನೆಯು ಉಪನಿಷತ್ತುಗಳ ಮೂಲಕ ಪ್ರಕಟವಾಯಿತು. ಸೃಷ್ಟಿ, ಜೀವಾತ್ಮ, ಪರಮಾತ್ಮ ಮೊದಲಾಗಿ ಜೀವನದ ಜಟಿಲ ಸಮಸ್ಯೆಯ ನೂರಾರು ಪ್ರಶ್ನೆಗಳಿಗೆ ಉತ್ತರ ಹಾಗು ಸಮಾಧಾನವನ್ನು ಅದ್ವಿತೀಯ ಅಧ್ಯಾತ್ಮವಿದ್ಯೆಯನ್ನು ಉಪನಿಷತ್ತುಗಳಲ್ಲಿ ಕಾಣಬಹುದು. ವೇದಸಾಹಿತ್ಯದ ಅಂತ್ಯಭಾಗ ಯಾ

ವೇದದ ಪರಮಾರ್ಥವನ್ನು ವೇದಾಂತವೆಂದು ಹೆಸರಿಸಿದ್ದಾರೆ. ಉಪನಿಷತ್ತುಗಳು 108 ಇವೆಯೆಂದು ಮುಕ್ತಿಕೋಪನಿಷತ್ತಿನಲ್ಲಿ ತಿಳಿಸಿದ್ದರೂ, ಪ್ರಸ್ತುತ 120ಕ್ಕೂ ಮಿಗಿಲಾಗಿ ಉಪನಿಷತ್ತುಗಳಿವೆ.

ಉಪನಿಷತ್ತಿನ ತತ್ತ್ವಜ್ಞಾನ ಯಾವ ಒಂದು ಗುಂಪಿಗಾಗಲೀ, ಜನಾಂಗಕ್ಕಾಗಲಿ ಪ್ರಕಾಶಿತವಾದುದಲ್ಲ. ಬದಲಿಗೆ ಎಲ್ಲಾ ಜೀವಿಗಳಿಗೂ ಚೈತನ್ಯ ಸ್ಫೂರ್ತಿಯನ್ನು ಉಂಟುಮಾಡುತ್ತಿರುವ ವಿಶ್ವವ್ಯಾಪಕ ತತ್ತ್ವಜ್ಞಾನದ ಭಂಡಾರವೇ ಆಗಿದೆ.

ಒಟ್ಟಿನಲ್ಲಿ ವೇದ ಸಂಸ್ಕೃತಿ, ಜ್ಞಾನ, ಕರ್ಮ ಮಾರ್ಗವಾಗಿ ಶ್ರೇಯಸ್ಸನ್ನು ಪ್ರೇಯಸ್ಸನ್ನು ಕರುಣಿಸಿ ಭಗವತ್ಪ್ರಸಾದಪ್ರಾಪ್ತಿಯ ಪರಮಲಕ್ಷ್ಯವನ್ನು ಸಾರಿದೆ. ಯಜ್ಞ ವಿಷಯವಿರಲಿ, ಜ್ಞಾನ ವಿಚಾರವಾಗಲಿ ವೇದಋಷಿಗಳ ಅಮರವಾಣಿ ಮುಂದಿನ ಸಾಹಿತ್ಯ ಪ್ರಕಾರಗಳಿಗೆಲ್ಲಾ ಪ್ರೇರಕವಾಗಿದೆ. ಪರಮ ಪ್ರಮಾಣವಾಗಿದೆ. ಹೀಗೆ ಅನೂಚಾನ ಪದ್ಧತಿಯಲ್ಲಿ ಇಂದಿಗೂ ವೇದಪ್ರಕಾಶ ನಮಗೆ ನಾನಾ ವಿಧದ ಮಾರ್ಗದರ್ಶನ ಮಾಡುತ್ತಿದೆಯೆಂಬುದಕ್ಕೆ ಅದರ ಬಗ್ಗೆಯಿರುವ ಸಹಸ್ರಾರು ಪುಟಗಳ ವಿದ್ವತ್ ಸಂಶೋಧನೆಯೇ ಸಾಕ್ಷಿಯಾಗಿದೆ.

ವೇದದ ನಿಗೂಢ ತತ್ತ್ವಜ್ಞಾನ ಹಾಗು ಬಹುವಿಧ ಅರ್ಥ ಭಾವವನ್ನು ಸರಳವಾಗಿ ಪ್ರತಿಬಿಂಬಿಸಲು ಆಖ್ಯಾನಗಳ ರಚನೆಯು ರೂಪಿತವಾಯಿತು. ವೇದ ಧರ್ಮ, ನೀತಿ ಬೋಧೆಗಳನ್ನು ಲಕ್ಷ್ಯದಲ್ಲಿಟ್ಟು ಜನ ಸಾಮಾನ್ಯರಿಗೂ

ಅವುಗಳ ಅರ್ಥ ಸ್ಫುರಣೆಯಾಗುವಂತೆ, ದೇವತಾರ್ಚನೆ, ಭಕ್ತಿಮಾರ್ಗ, ಆಚಾರ ವಿಚಾರ, ನದೀ ತೀರ್ಥ ಕ್ಷೇತ್ರಗಳ ಮಹಾತ್ಮೆ, ಸೃಷ್ಟಿಯ ನಾನಾ ಪ್ರಕಾರಗಳು, ಅದರ ವೈಶಿಷ್ಟ್ಯ, ಪರಂಪರಾಗತ ಪ್ರಾಚೀನ ಸೂರ್ಯಚಂದ್ರಾದಿ ರಾಜರ ಮತ್ತು ಋಷಿಗಳ ಇತಿಹಾಸ ಇತ್ಯಾದಿ ವಿಷಯಗಳ ಸವಿಸ್ತಾರ ರೂಪದಲ್ಲಿ ಅಷ್ಟಾದಶ - (ಹದಿನೆಂಟು) ಪುರಾಣ ಹಾಗೂ ಉಪ ಪುರಾಣಗಳು, ಆಗಮ ಹಾಗೂ ತಂತ್ರ ಸಾಹಿತ್ಯಗಳು ಪ್ರಸ್ತುತವಾದವು. ವೇದಾರ್ಥದ ಪ್ರತಿಪಾದನೆಯ ಮೂಲಕ ವೇದ ಮಹಾತ್ಮೆಯನ್ನು, ವೈದಿಕ ಧರ್ಮವಾದ ಸನಾತನಧರ್ಮದ ವೈಶಾಲ್ಯವನ್ನು ಜನ ಸಾಮಾನ್ಯರಾದಿಯಾಗಿ ಎಲ್ಲರಿಗೂ ಮನವರಿಕೆಯಾಗುವಂತೆ ಮಾಡಲು ಪುರಾಣಾದಿಗಳ ರಚನೆಯಾಯಿತು.

ಪರಂಪರೆ, ಭಿನ್ನ ಭಿನ್ನ ಸಂಸ್ಕೃತಿ, ಭೌಗೋಳಿಕ ವಿಶಿಷ್ಟತೆಗಳು, ಜೀವನ ಕ್ರಮ ಮೊದಲಾಗಿ ನಿರೂಪಿತ ವಿಷಯಗಳು ತಿಳುವಳಿಕೆಯ ನಾನಾ ಪ್ರಕಾರಕ್ಕೆ ಗ್ರಾಸವಾದವು, ಇಷ್ಟೇ ಅಲ್ಲದೆ ವಿದ್ಯೆಯ ನಾನಾ ಪ್ರಕಾರಗಳಾದ ಸಂಗೀತ, ಶಿಲ್ಪ, ಜ್ಯೋತಿಷ್ಯ, ವೈದ್ಯ, ವ್ಯಾಕರಣ, ಅಲಂಕಾರ, ಧರ್ಮಶಾಸ್ತ್ರ, ವೇದಾಂತ, ಸಾಂಖ್ಯ, ಯೋಗ, ಧನುರ್ವೇದ, ಚಿತ್ರಕಲೆ, ಮೊದಲಾಗಿ ವಿವಿಧ ಶಾಸ್ತ್ರಗಳ ವಿಸ್ತೃತ ವಿವರಣೆಯೂ ಪ್ರಕಟವಾಯಿತು.

ವರ್ಣ, ಅಕ್ಷರ, ಮಂತ್ರ ಯಂತ್ರ,ತಂತ್ರಶಾಸ್ತ್ರಗಳ ರಹಸ್ಯ ಶಕ್ತಿಯ ಉಲ್ಲೇಖಗಳು, ಜ್ಞಾನ, ಯೋಗ, ಕ್ರಿಯಾ ಮತ್ತು ಚರ್ಯಾ ಪದ್ಧತಿಗಳು, ಅವುಗಳಲ್ಲಿ ಅಡಗಿರುವ ಅನೇಕ ರಹಸ್ಯಾತ್ಮಕ ವಿಚಾರಗಳು, ವಿಧಿಗಳು,

ಸಾಧನೆ, ಕರ್ಮಕಾಂಡ, ನಾನಾ ಸಂಪ್ರದಾಯಗಳು, ಉಪಾಸನಾ ವಿವೇಚನೆ ಮೊದಲಾದ ವಿಷಯಗಳನ್ನೊಳಗೊಂಡ ತಂತ್ರ, ಆಗಮ ಮೊದಲಾದ ಸಾಹಿತ್ಯ ಪ್ರಕಾರದ ಗ್ರಂಥಗಳು ಹೊರಬಂದವು, ವೇದ ವಿದಿತವಾದ ತತ್ತ್ವಜ್ಞಾನದ ಪ್ರತಿಪಾದನೆಗಾಗಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಪುರಾಣ ಆಗಮಾದಿ ಸಾಹಿತ್ಯಪ್ರಕಾರಗಳು ಕಾವ್ಯಕಲೆಯು ಪ್ರಾದುರ್ಭವಿಸಿತು.

ಕಾವ್ಯಗಳು ಹೃದಯಕ್ಕೆ ಆನಂದವನ್ನು, ಮನಸ್ಸಿಗೆ ಆಹ್ಲಾದತೆಯನ್ನು ಉಂಟು ಮಾಡುವವು. ಎಲ್ಲರ ಅಭ್ಯುದಯವೇ ಅದರ ಗುರಿ. ಲೋಕದ ನಾನಾ ವಿಚಾರಗಳ ವರ್ಣನೆಗಳು, ಮೃದು ಮಧುರ ಭಾಷೆಯಲ್ಲಿ ವ್ಯಕ್ತವಾಗಿರುವುದು. ಪ್ರತಿಭಾಶಾಲಿಯಾದವನೇ ಕವಿ. ಅವನ ಕರ್ಮವೇ ಕಾವ್ಯ. ಅದರಲ್ಲಿ ರಸಕ್ಕೆ ಪ್ರಾಶಸ್ತ್ಯ.

ಕಾವ್ಯದಲ್ಲಿ ದೃಶ್ಯ ಕಾವ್ಯ ಮತ್ತು ಶ್ರವ್ಯ ಕಾವ್ಯ ಎಂದು ಎರಡು ವಿಧ. ದೃಶ್ಯವು ನೋಡಲು ಯೋಗ್ಯವಾದುದು. ಅಂಗಾಂಗಗಳ ಸಹಾಯದಿಂದ ಭಾವ ಪೂರ್ವಕ ಅಭಿನಯವು ದೃಶ್ಯ ರೂಪದಲ್ಲಿ ಮೂಡಿಬರುವುದು. ನಟನೆಯೇ ಪ್ರಧಾನವಾದ ದೃಶ್ಯ ರೂಪದಲ್ಲಿ ನಾಟಕ, ಪ್ರಕರಣ, ಪ್ರಹಸನ, ವ್ಯಾಯೋಗ ಮೊದಲಾಗಿ ಹತ್ತು ಪ್ರಕಾರವಿದೆ. ಒಂದೊಂದಕ್ಕೂ ಅಲ್ಪ ಸ್ವಲ್ಪ ವ್ಯತ್ಯಾಸವಿದ್ದಾಗ್ಯೂ, ಎಲ್ಲದರಲ್ಲೂ ದೃಶ್ಯವೇ ಪ್ರಧಾನವಾಗಿರುವುದು.

ಶ್ರವ್ಯವೆಂದರೆ ಕೇಳಲು ಯೋಗ್ಯವಾದುದು. ರಮಣೀಯವಾದ ಕಾವ್ಯದ ಅರ್ಥ ಪ್ರತಿಪಾದನೆಯೇ ಇಲ್ಲಿ ಮುಖ್ಯವಾದುದು. ಕಾವ್ಯದ

ಪ್ರತಿಪದಗಳು, ಅದರ ಅರ್ಥವೂ ಶ್ರವಣೇಂದ್ರಿಯದ್ವಾರಾ ಬೋಧಕವಾಗುವುದರಿಂದ ಶ್ರವ್ಯ ಕಾವ್ಯವೆಂದಿದ್ದಾರೆ. ಪದ್ಯ, ಗದ್ಯ, ಮತ್ತು ಗದ್ಯಪದ್ಯಮಿಶ್ರಣವೆಂದು ಶ್ರವ್ಯಕಾವ್ಯದ ಮೂರು ಪ್ರಕಾರಗಳಿವೆ. ಅಕ್ಷರಗಳ ಪ್ರಮಾಣ, ಮಾತ್ರಾಕಾಲ, ಛಂದಸ್ಸು ಮೊದಲಾದವುಗಳ ನಿಖರ ಗಣನೆಯಿಂದ ಕೂಡಿದೆ.

ರಾಮಾಯಣ ಮತ್ತು ಮಹಾಭಾರತವನ್ನು ಮಹಾಕಾವ್ಯಗಳೆಂದು ಪ್ರಧಾನವಾಗಿ ಗ್ರಹಿಸಿದ್ದರೂ ಸಾಹಿತ್ಯ ಪ್ರಪಂಚದಲ್ಲಿ 1) ರಘುವಂಶ 2) ಕುಮಾರ ಸಂಭವ 3) ಶಿಶುಪಾಲವಧೆ 4) ಕಿರಾತಾರ್ಜುನೀಯ ಮತ್ತು 5) ನೈಷಧಚರಿತವನ್ನು ಪ್ರಸಿದ್ಧ ಪಂಚಮಹಾಕಾವ್ಯಗಳೆಂದು ಪರಿಗಣಿಸಿದ್ದಾರೆ. ಈ ಮಹಾಕಾವ್ಯಗಳ ಬಗ್ಗೆ ಪರಿಚಯ ಪಡೆಯಲು ಪ್ರಯತ್ನಿಸೋಣ.

ಗಿರಿ ಶಿಖರ ನಗರಾದಿಯಾಗಿ ಹದಿನೆಂಟು ವಿಧದ ವರ್ಣನೆಗಳಿಂದ ಯುಕ್ತವಾಗಿ ಚತುರತೆ ಹಾಗು ಉದಾತ್ತ ನಾಯಕನ ಗುಣಗಳ ವರ್ಣನೆಗಳಿಂದ, ನಿರಂತರ ರಸಭಾವದಿಂದ ಕೂಡಿ ಸಂಕ್ಷಿಪ್ತ ವಿವರಗಳೊಂದಿಗೆ ಆಹ್ಲಾದಕರವಾಗಿ ನಾಲ್ಕೂ ವರ್ಗಗಳ ಫಲದಾಯಕವಾದ ಕಾವ್ಯವು ಮಹಾಕಾವ್ಯ ಎಂದು ಕಾವ್ಯಮೀಮಾಂಸಕರು ಸ್ಪಷ್ಟಪಡಿಸಿದ್ದಾರೆ. ಸಾರಸ್ವತ ಜಗತ್ತಿನಲ್ಲಿ ಅದ್ಭುತಸ್ಥಾನ ಕಾವ್ಯಗಳಿಗಿದೆ. ವಿಶಿಷ್ಟ ಜ್ಞಾನರಾಶಿಯಾದ ವೇದದ ತಿಳಿವಿನ ಸುವಿಚಾರಗಳು, ಇನ್ನೂ ಸ್ಪಷ್ಟವಾಗಿ ಸಾಮಾನ್ಯರಾದಿಯಾಗಿ ಎಲ್ಲರಿಗೂ ಸುಲಭ ರೀತಿಯಲ್ಲಿ ಅರ್ಥವಾಗುವ ಹಾಗೆ ವಿಷಯಗಳು ಕಾವ್ಯದಲ್ಲಿ ಪ್ರಕಟವಾಗಿವೆ. ವಿಷಯ, ವಿಚಾರ ಹಾಗೂ

ಗಾತ್ರದಲ್ಲಿ ಬಹು ದೊಡ್ಡದಾದ ರಾಮಾಯಣ, ಮಹಾಭಾರತ ಮಹಾಕಾವ್ಯಗಳ ಬಗ್ಗೆ ಮೊದಲು ತಿಳಿಯೋಣ.

ಭಾರತೀಯ ಪುರಾತನ ಸಂಸ್ಕೃತಿ ನಾಗರಿಕತೆಯ ಮಹತ್ವದ ವಿಚಾರಗಳು ಇರುವುದರಿಂದ ರಾಮಾಯಣ ಮಹಾಭಾರತವು ಇತಿಹಾಸವೂ ಹೌದು.

## ರಾಮಾಯಣ

ಕಾವ್ಯ ಪ್ರಪಂಚದಲ್ಲಿ ಅತ್ಯಂತ ಸರಳ, ಸುಂದರ, ಸುಲಲಿತ ಕಾವ್ಯವೆಂಬ ಕೀರ್ತಿ ರಾಮಾಯಣಕ್ಕೆ ಸಲ್ಲುತ್ತದೆ. ಸಂಸ್ಕತವನ್ನು ಬಹಳ ಸರಳ ಹಾಗೂ ಸುಲಭ ಶೈಲಿಯಲ್ಲಿ ಬಳಸಿದವರು ವಾಲ್ಮೀಕಿಮಹರ್ಷಿಗಳು ರಸಭಾವಗಳನ್ನು ಸೂಕ್ತವಾದ ಉಪಮಾಲಂಕಾರ, ರೂಪಕಾಲಂಕಾರಗಳಿಂದ, ಎಲ್ಲ ರೀತಿಯಲ್ಲಿ ಪುಷ್ಟಿಗೊಳಿಸಲಾಗಿದೆ. ಛಂದೋರಾಜನಾದ ಅನುಷ್ಟುಪ್ ಅಧಿಕವಾಗಿದ್ದರೂ ಇತರ ಛಂದಸ್ಸುಗಳಿಗೇನು ಕೊರತೆಯಿಲ್ಲ.

ನವರಸಗಳು ಬಹಳ ಸಾರವತ್ತಾಗಿ ಅಭಿವ್ಯಕ್ತವಾಗಿವೆ. ಶ್ರೀರಾಮ ಸೀತೆಯರಲ್ಲಿ ಲಲಿತವಾದ ಶೃಂಗಾರ, ರಾವಣ ಶೂರ್ಪಣಖಿಯರ ನುಡಿಗಳಲ್ಲಿ ಶೃಂಗಾರಾಭಾಸವು ವ್ಯಕ್ತವಾಗಿದೆ. ತಾರಾ, ಮಂಡೋದರಿ ಪ್ರಸಂಗದಲ್ಲಿ ಕರುಣರಸ, ಮಂಥರೆಯನ್ನು ಕುರಿತು ಕೈಕೇಯಿಯ ಪ್ರಶಂಸೆಗಳು, ಕಪಿ ಚೇಷ್ಟಾ ಪ್ರಸಂಗದಲ್ಲಿ ಹಾಸ್ಯವೂ, ಸಮುದ್ರ ಲಂಘನದಲ್ಲಿ ಅದ್ಭುತ ರಸವು, ಲಂಕಾದಹನ ಯುದ್ಧ ಕಾಂಡದಲ್ಲಿ ರೌದ್ರ, ಭಯಾನಕ,

ಭೀಭತ್ಸರಸಗಳು, ಖರ ಸಂಹಾರ ಮೊದಲಾದೆಡೆ ವೀರರಸವು, ಅಗಸ್ತ್ಯಾಶ್ರಮ ವರ್ಣನೆ ಮೊದಲಾದೆಡೆ ಶಾಂತ ರಸವೂ, ಹೀಗೆ ನವರಸಗಳ ಸಾಗರ ಹರಿದಿದೆ. ಒಟ್ಟಿನಲ್ಲಿ ಅತ್ಯಂತ ಶ್ರೇಷ್ಠವಾದ ಧ್ವನಿಕಾವ್ಯವಾಗಿದೆ. ರಾಮಾಯಣದ ಪುಟ ಪುಟಗಳನ್ನು ತಿರುವುತ್ತಾ ಹೋದಷ್ಟು ಓದುಗರ ಹೃದಯವನ್ನು ಸೆರೆಹಿಡಿದು ತನ್ಮಯ ಚಿತ್ತದಿಂದ, ಆಸಕ್ತಿ ಹಾಗೂ ಕುತೂಹಲದಿಂದ ಯಾವ ರೀತಿಯ ರಸಭಂಗವೂ ಇಲ್ಲದೇ ನಿರಂತರವಾಗಿ ಓದಬೇಕೆನ್ನುವಂತೆ ಮನಸ್ಸನ್ನು ಸೂರೆಗೊಳ್ಳುವಂತಹ ಅದ್ಭುತ ಶೈಲಿಯಲ್ಲಿ ಶ್ರೀರಾಮಾಯಣವನ್ನು ರಚಿಸಿರುವ ವಾಲ್ಮೀಕಿ ಮುನಿಗಳ ಅಸಾಧಾರಣ ಪ್ರತಿಭೆಯನ್ನು ಎಷ್ಟು ಹೊಗಳಿದರೂ ಕಡಿಮೆ.

ರಾಮಾಯಣದಲ್ಲಿ ವಾಲ್ಮೀಕಿಗಳು ತಮ್ಮ ಬಗ್ಗೆ ಹೀಗೆ ಹೇಳುತ್ತಾರೆ. ನಾನು ಹಿಂದೆ ಬೇಡನಾಗಿ ಬೇಡರ ಜೊತೆಯಲ್ಲಿ ಬೆಳೆದೆ. ಜನ್ಮ ಮಾತ್ರದಿಂದ ದ್ವಿಜನಾದರೂ ಸದಾ ಶೂದ್ರಾಚಾರದಲ್ಲಿ ಕಳೆದೆ. ಹೀಗಿರುವಾಗ ಋಷಿ ಉಪದೇಶದಂತೆ ಜಪಮಾಡುತ್ತಾ ಬಹುಕಾಲ ಕಳೆಯಲು, ಅತ್ಯಂತ ಭಕ್ತಿ ಭಾವದಿಂದ ತದೇಕ ಚಿತ್ತದಿಂದ ತಪಗೈಯುತ್ತಿದ್ದ ಅವರ ಮೇಲೆ ದೊಡ್ಡದಾದ ಹುತ್ತ ಬೆಳೆದು ಕಾಲಾನಂತರ ಮತ್ತೆ ಆ ಋಷಿಗಳು ಬಂದು ಬಾ ಎಂದು ಕರೆದಾಗ ಆತ್ಮಜ್ಞಾನ, ಆತ್ಮ ದರ್ಶನವನ್ನು ಹೊಂದಿದ ಋಷಿಯು ಹುತ್ತದಿಂದ ಹೊರ ಬಂದದ್ದರಿಂದ ವಾಲ್ಮೀಕಿ ಎಂದು ನಾಮಾಂಕಿತರಾದರೆಂದು ತಿಳಿಯುತ್ತದೆ. ಹಾಗೆಯೇ ಪ್ರಚೇತಸ್ ಎಂಬ

ಋಷಿಯ ವಂಶಜರಾದುದರಿಂದ ಪ್ರಾಚೇತಸ ಎಂದು ಭೃಗು ವಂಶೀಯರಾದುದರಿಂದ ಭಾರ್ಗವ ಎಂದು ಸಹ ವ್ಯವಹಾರವಿದೆ.

ತಮ್ಮ ಆಶ್ರಮದಲ್ಲಿ ವಾಲ್ಮೀಕಿಗಳು ಶಿಷ್ಯರೊಡಗೂಡಿ ತಮಸಾ ನದಿಗೆ ಸ್ನಾನಾದಿ ಸಂಧ್ಯಾಚರಣೆಗೆ ಹೋಗಿದ್ದಾರೆ. ಸಮೀಪದಲ್ಲಿ ಒಂದು ಮರದ ಮೇಲೆ ಎರಡು ಕ್ರೌಂಚಪಕ್ಷಿಗಳು ಕಾಮಮೋಹಿತವಾಗಿ ನಲಿದಾಡುತ್ತಿರುವಾಗ ಬೇಡನೊಬ್ಬ ಬಿಟ್ಟ ಬಾಣದಿಂದ ಗಂಡು ಹಕ್ಕಿ ಸಾಯುತ್ತದೆ. ಆಗ ಹೆಣ್ಣು ಹಕ್ಕಿ ಬಹಳವಾಗಿ ಗೋಳಿಡುತ್ತದೆ. ಇದನ್ನು ಕಂಡ ವಾಲ್ಮೀಕಿಗಳ ಮನಸ್ಸು ಕರಗಿ ಕ್ರೌಂಚ ಪಕ್ಷಿಯ ದುಃಖದಲ್ಲಿ ತಲ್ಲೀನವಾಗಿ

***ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ |***
***ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ||***

ಎಂಬ ಛಂದೋಬದ್ಧವಾದ ಶ್ಲೋಕವು ಹೊರ ಹೊಮ್ಮಿತು. ಹೀಗೆ ಪ್ರಸಂಗ ವೇದನೆಯಿಂದ ಮತ್ತೆ ಮತ್ತೆ ಅದೇ ವಿಚಾರವನ್ನು ಮಥಿಸುತ್ತಾ ಆಶ್ರಮಕ್ಕೆ ಹಿಂದಿರುಗುತ್ತಾರೆ. ಬ್ರಹ್ಮನ ಭೇಟಿಯಾಗಿ ಪರಸ್ಪರ ವಿಷಯಗಳು ಚರ್ಚಿತವಾಗುತ್ತಾ ತಮ್ಮ ಇರುವಿಕೆಯ ಕಾಲದಲ್ಲೇ ನಡೆಯುತ್ತಿರುವ ಅವತಾರ ಪುರುಷನಾದ ರಾಜಾರಾಮನ ವೃತ್ತಾಂತವನ್ನು ಕುರಿತು ಕಾವ್ಯ ಜ್ಯೋತಿಯನ್ನು ಬೆಳಗಲು ಅನುವಾಗುತ್ತಾರೆ. ತಮಗರಿಯದಂತೆ ನಡೆದು ಹೋದ, ನಡೆಯುತ್ತಿರುವ ಸೂಕ್ಷ್ಮಾತಿಸೂಕ್ಷ್ಮ ಪ್ರಸಂಗಗಳ ಅವಧಾನತೆಯಿಂದ ರಾಮಾಯಣವು ರಚಿತವಾಗುತ್ತದೆ. ಆದಿಕಾವ್ಯವೆಂದು ಲೋಕ ಪ್ರಸಿದ್ಧವಾಗಿದೆ.

ವಾಲ್ಮೀಕಿಗಳ ಬಗ್ಗೆ ಹೆಚ್ಚಾಗಿ ತಿಳಿಯದಿದ್ದರೂ ಅವರು ತಮಸಾ ನದೀ ತೀರದ ಆಶ್ರಮದಲ್ಲಿ ಇದ್ದರೆಂದೂ ವನವಾಸದಲ್ಲಿ ರಾಮ ಲಕ್ಷ್ಮಣರನ್ನು ಚಿತ್ರಕೂಟ ಸಮೀಪದಲ್ಲಿ ಸಂದರ್ಶಿಸಿದರೆಂದೂ ಉತ್ತರ ಕಾಂಡದ ಸೀತಾ ವಿಸರ್ಜನ ಪ್ರಸಂಗದಲ್ಲಿ ಅವರ ಆಶ್ರಮ ಗಂಗಾ ನದಿ ಸಮೀಪದಲ್ಲಿತ್ತೆಂದೂ ತಿಳಿಯುತ್ತದೆ. ರಾಮಾಯಣದ ರಚನೆಯಷ್ಟೇ ಅಲ್ಲದೆ ಪರಿತ್ಯಕ್ತಳಾದ ಸೀತೆಗೆ ಆಶ್ರಯವಿತ್ತು, ಅವಳು ಹೆತ್ತ ಮಕ್ಕಳಿಗೆ ಕುಶ - ಲವರೆಂದು ನಾಮಕರಣ ಮಾಡಿ, ಸಾಕಿ ಸಲಹಿ ಅವರಿಗೆ ರಾಮಾಯಣವನ್ನು ಸುಶ್ರಾವ್ಯವಾಗಿ ಹಾಡಲು ಕಲಿಸಿ ಶ್ರೀರಾಮನಿಗೆ ಸೀತಾ ಸಂದರ್ಶನವನ್ನು ಮಾಡಿಸುತ್ತಾರೆ.

**ಕಾಲ:** ಶ್ರೀರಾಮ ಜೀವಿಸಿದ್ದ ಕಾಲದಲ್ಲಿಯೇ ರಾಮಾಯಣದ ರಚನೆಯಾಯಿತೆಂದು ಸ್ವತಃ ರಾಮಾಯಣದಿಂದಲೇ ತಿಳಿಯುತ್ತದೆ. ರಾಮಾಯಣ ಕಾಲದ ಬಗ್ಗೆ ಅನೇಕ ಅಭಿಪ್ರಾಯ ಇದ್ದರೂ ಸಾಂಪ್ರದಾಯಿಕವಾದ ಭಾರತೀಯರ ದೃಷ್ಟಿಯಲ್ಲಿ

| | |
|---|---|
| **ತ್ರೇತಾಯುಗ ಅವಶಿಷ್ಟ** | **30,000 ವರ್ಷ** |
| **ದ್ವಾಪರ ಯುಗ** | **8,64,000 ವರ್ಷ** |
| **ಕ್ರಿ.ಶ. 2010 ಕಲಿಯುಗದಲ್ಲಿ ಗತ** | **5,112 ವರ್ಷ** |
| **ಮೊತ್ತ** | **8, 99, 112 ವರ್ಷ** |

ಇಷ್ಟು ಪ್ರಾಚೀನ ಎಂಬುದನ್ನು ಆಧುನಿಕ ವಿದ್ವಾಂಸರು ಒಪ್ಪುವುದಿಲ್ಲ. ನಾನಾ ವಿಧದ ಪ್ರಕ್ಷೇಪಗಳು ಸೇರಿ ಈಗಿನ ರಾಮಾಯಣವು ಪ್ರಚಲಿತವಿದೆ ಎಂದು, ಬೌದ್ಧಧರ್ಮಕ್ಕೆ ಪೂರ್ವದಲ್ಲಿ ಮೂಲ

ರಾಮಾಯಣವು ಹುಟ್ಟಿತೆಂದು ಕ್ರಿ. ಪೂ. 6 ರಿಂದ 8 ಶತಕಗಳ ಕಾಲಾವಧಿಯಲ್ಲಿ ನಿರ್ಮಾಣವಾಯಿತೆಂದೂ ಡಾ. ಯಾಕೊಬಿ ಮತ್ತು ಮ್ಯಾಗ್ಡಾನಲ್ ಅವರು ಅಭಿಪ್ರಾಯ ಪಟ್ಟರೆ ಕೀತ್ ರವರು ಕ್ರಿ.ಪೂ 4ನೆಯ ಶತಕವೆನ್ನುತ್ತಾರೆ. ವಿಂಟರ್ನಿಟ್ಸ್ ರವರು ರಾಮಾಯಣ ವಿಸ್ತಾರವನ್ನು ಗಮನಿಸಿ ಕ್ರಿ. ಶ. 2ನೇ ಶತಮಾನದ ಅಂತ್ಯದೊಳಗೆ ಸಮಾವೇಶವಾಗಿದೆ ಎನ್ನುತ್ತಾರೆ. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ (ಕ್ರಿ. ಪೂ.450) ಕೌಸಲ್ಯ, ಕೈಕೇಯ, ಮೊದಲಾದ ಶಬ್ದಗಳ ರೂಪ ನಿಷ್ಪತ್ತಿಯಿದೆ. ಸಾಹಿತ್ಯದ ವಿಮರ್ಶೆ ದೃಷ್ಟಿಯಲ್ಲಿ ಇದಕ್ಕೂ ಪೂರ್ವ ಕಾಲವೆನ್ನಬಹುದು.

ಕಾಲದ ಬಗ್ಗೆ ಏನೇ ಜಿಜ್ಞಾಸೆಯಿದ್ದರೂ ರಾಮಾಯಣ ಒಂದು ವಿಶಿಷ್ಟ ಪ್ರಸಂಗ, ಅದರಲ್ಲಿಯೂ ಎಲ್ಲಾ ಪಾತ್ರಧಾರಿಗಳ ವಿಚಾರಗಳು ಪ್ರಬುದ್ಧ ಹಾಗೂ ರೋಮಾಂಚನಕಾರಿಯಾಗಿವೆ. ಎಷ್ಟೇ ಕೇಳಿದ್ದರೂ, ತಿಳಿದಿದ್ದರೂ ಮತ್ತೆ ಮತ್ತೆ ರಾಮಾಯಣದ ವಿಚಾರವನ್ನು ಮತ್ತಷ್ಟು ಕೇಳಿ ಮತ್ತಷ್ಟು ಅರ್ಥೈಸಿಕೊಳ್ಳಬೇಕು ಎಂಬ ಹಂಬಲ ಅವ್ಯಾಹತವಾಗಿ ಸಹಸ್ರಾರು ವರ್ಷಗಳಿಂದಲೂ ಕೇವಲ ಭಾರತೀಯರಿಗೆ ಏಕೆ? ವಿಶ್ವದೆಲ್ಲೆಡೆಯೂ ಇದೆ.

ಏಷ್ಯಾ ಆಗ್ನೇಯ ರಾಷ್ಟ್ರಗಳಲ್ಲಿ ರಾಮಾಯಣ ಬಹಳ ಪ್ರಚಲಿತವಾಗಿದೆ.

ಥೈಲ್ಯಾಂಡಿನಲ್ಲಿ ನಾಂಗ್ ಎಂಬ ಬೊಂಬೆಯಾಟದ ಮೂಲಕ ರಾಮಕಥೆ ಪ್ರದರ್ಶಿಸುತ್ತಾರೆ. ಜಾವಾದಲ್ಲಿ ಶಿವಾಲಯವಿದೆ. ಅದರ ಶಿಲಾಫಲಕಗಳ ಮೇಲೆ ಸಮಗ್ರ ರಾಮಾಯಣ ಕಥೆಯನ್ನು ಚಿತ್ರಿಸಲಾಗಿದೆ.

ಬಾಲಿ ದ್ವೀಪದಲ್ಲಿ ರಾಮಾಯಣ ಕಥೆ ಆಬಾಲವೃದ್ಧರಿಗೂ ಗೊತ್ತಿದೆ. ಇಂಡೋನೇಷಿಯಾದ ಮಹಮ್ಮದೀಯರೂ ಸಹ ರಾಮಾಯಣವನ್ನು ಆಸಕ್ತಿಯಿಂದ ಓದುತ್ತಾರೆ. ಮೂಲ ವಾಲ್ಮೀಕಿರಾಮಾಯಣವನ್ನು ಪರಿಗಣಿಸದಿದ್ದರೂ ಕಥಾವಸ್ತು ಇತ್ಯಾದಿಯಲ್ಲಿ ಅನೇಕ ರೂಪಾಂತರ ಇದೆ.

ವಾಲ್ಮೀಕಿ ರಾಮಾಯಣವೇ ಆಧಾರವಾಗಿದ್ದು ಹಲವಾರು ರಾಮಾಯಣಗಳು ಆನಂತರ ಪ್ರಕಟವಾಗಿವೆ. ಮುಖ್ಯವಾದುದೆಂದರೆ ಅಧ್ಯಾತ್ಮ ರಾಮಾಯಣ, ಆನಂದರಾಮಾಯಣ, ವಾಸಿಷ್ಠರಾಮಾಯಣ, ಅದ್ಭುತರಾಮಾಯಣ, ಅಗ್ನಿವೇಶ್ಯರಾಮಾಯಣ, ಭೋಜನ ಚಂಪೂರಾಮಾಯಣ ಮೊದಲಾದವನ್ನು ಮುಖ್ಯವಾಗಿ ಉದಾಹರಿಸಬಹುದು. ಮಹಾಭಾರತದಲ್ಲಿ ಒಂದು ರಾಮ ಉಪಾಖ್ಯಾನವಿದೆ. ಸ್ಕಾಂದಪುರಾಣ, ಪದ್ಮಪುರಾಣ, ಕೂರ್ಮಪುರಾಣ ಹಾಗೂ ಭಾಗವತದಲ್ಲಿ ರಾಮಾಯಣ ವಿಷಯವು ವರ್ಣಿತವಾಗಿದೆ. ಬೌದ್ಧ ಜಾತಕದಲ್ಲಿ, ಜೈನ ಪುರಾಣಗಳಲ್ಲಿಯೂ ರಾಮಚರಿತೆ ಇದೆ. ರಚನಾ ಶೈಲಿ ಶ್ಲೋಕ ಸಂಖ್ಯೆ ಮೊದಲಾದೆಡೆ ವ್ಯತ್ಯಾಸವಿದೆ.

ರಾಮಾಯಣದಲ್ಲಿ ಒಟ್ಟು 24,000 ಶ್ಲೋಕಗಳು, 500 ಸರ್ಗಗಳೂ, 7 ಕಾಂಡಗಳೂ ಇವೆ ಎಂದು ಹೇಳಿದೆ. ಆದರೆ ದಾಕ್ಷಿಣಾತ್ಯ ಪಾಠದಲ್ಲಿ 647 ಸರ್ಗಗಳೂ, 24253 ಶ್ಲೋಕಗಳಿವೆಯೆಂದು ವ್ಯಾಖ್ಯಾನಕಾರರಿಂದ ತಿಳಿಯುತ್ತದೆ. ರಾಮಾಯಣದ ವಸ್ತುನಿಷ್ಠ ವಿಷಯಗಳು ಲೋಕದಲ್ಲಿ ಎಲ್ಲರಿಗೂ ಬಹಳ ಹಿಡಿಸಿರಬೇಕೆಂಬುದಕ್ಕೆ ಸಾಹಿತ್ಯ ಪ್ರಪಂಚದ ಮೇಲೆ ಅದರ ಪ್ರಭಾವವೇ ಸಾಕ್ಷಿ. ಮುಂದೆ ಬೆಳೆದ ಸಾಹಿತ್ಯದಲ್ಲಿ

ರಾಮಾಯಣವೇ ಆಧಾರವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ರಾಮಾಯಣವನ್ನು ಅವಲಂಬಿಸಿ ಸಾಹಿತ್ಯ ಪ್ರಪಂಚದಲ್ಲಿ ದೊರೆಯುವ ಕಾವ್ಯ, ಚಂಪೂ, ನಾಟಕಗಳಿಗೆ ಲೆಕ್ಕವೇ ಇಲ್ಲ. ರಾಮಾಯಣ ಮಂಜರೀ, ಭಟ್ಟಿ ಕಾವ್ಯ, ಜಾನಕೀಹರಣ, ಚಂಪೂ ರಾಮಾಯಣ, ಅನರ್ಘ ರಾಘವ, ಉತ್ತರ ರಾಮಚರಿತೆ, ಅಭಿಷೇಕನಾಟಕ, ಪ್ರತಿಮಾನಾಟಕ ಮೊದಲಾದವು ಪ್ರಖ್ಯಾತವಾದವು. ಪ್ರಾಕೃತದ ಸೇತುಬಂಧವಲ್ಲದೇ, ಕನ್ನಡ, ತಮಿಳು, ತೆಲುಗು, ಹಿಂದಿ ಮೊದಲಾಗಿ ಅನೇಕ ಭಾರತೀಯ ಭಾಷೆಯಲ್ಲೂ ಅನೇಕ ಪಾಶ್ಚಾತ್ಯ ಭಾಷೆಗಳಲ್ಲೂ ರಾಮಾಯಣವನ್ನು ಆಧರಿಸಿ ಬರೆದ ಸಾಹಿತ್ಯಕ್ಕೆ ಲೆಕ್ಕವೇ ಇಲ್ಲ. ವಾಲ್ಮೀಕಿ ರಾಮಾಯಣ ಏಳು ಕಾಂಡಗಳಿಂದ ಕೂಡಿದೆ.

**1 ಬಾಲಕಾಂಡ**

`ರಾಮ ಲಕ್ಷ್ಮಣ ಭರತ ಶತ್ರುಘ್ನರ ಅವತಾರ, ವಸಿಷ್ಠ ವಿಶ್ವಾಮಿತ್ರರ ವಿಚಾರ, ವಿಶ್ವಾಮಿತ್ರರ ಜೊತೆಗೆ ವನಪ್ರವೇಶ, ಅವರಿಂದ ನಾನಾವಿಧ ಉಪದೇಶ ಸ್ವೀಕಾರ, ತಾಟಕಿ, ಸುಬಾಹು ಮೊದಲಾದವರ ಸಂಹಾರ, ಅಹಲ್ಯಾಶಾಪವಿಮೋಚನೆ, ಶಿವಧನುಸ್ಸನ್ನು ಭಂಗಮಾಡಿ ಸೀತಾದೇವಿಯೊಡನೆ ಪಾಣಿಗ್ರಹಣ, ಪರಶುರಾಮ ಗರ್ವಭಂಗ, ಸೀತೆಯೊಡನೆ ಅಯೋಧ್ಯಾ ಪ್ರವೇಶವು ವರ್ಣಿತವಾಗಿದೆ.

**2 ಅಯೋಧ್ಯಾ ಕಾಂಡ**

ದಶರಥನಿಂದ ಶ್ರೀ ರಾಮನಪಟ್ಟಾಭಿಷೇಕ ಪ್ರಸ್ತಾಪ, ಮಂಥರೆಯಿಂದ ಪ್ರೇರಿತಳಾದ ಕೈಕೇಯಿಯಿಂದ ವಿಘ್ನ, ಶ್ರೀರಾಮನಿಗೆ ಹದಿನಾಲ್ಕು ವರ್ಷ

ವನವಾಸ ಪ್ರಾಪ್ತವಾಗಿ ಸೀತಾ ಲಕ್ಷ್ಮಣರೊಡನೆ ವನವಾಸ ಪ್ರಾರಂಭ. ತಮಸಾ ನದೀತೀರದ ಮೂಲಕ ಭರದ್ವಾಜಾಶ್ರಮ, ಚಿತ್ರಕೂಟ, ವಸಿಷ್ಠ ಜಾಬಾಲಿ ಅತ್ರಿ ಮುನಿಗಳ ಸಮಾಗಮ, ಅವರಿಂದ ಸುವಿಚಾರ ಪಡೆದುದು. ದಶರಥ ವಿಯೋಗಾನಂತರ ಚಿತ್ರಕೂಟದಲ್ಲಿ ತಮ್ಮಂದಿರ ಭೇಟಿ, ಶ್ರೀರಾಮನ ಪಾದುಕೆಯನ್ನು ಪಡೆದು ನಂದಿಗ್ರಾಮದಲ್ಲಿ ಭರತನು ವಾಸಮಾಡಿಕೊಂಡಿದ್ದುದು ವಿವರಿತವಾಗಿದೆ.

### 3 ಅರಣ್ಯಕಾಂಡ

ದಂಡಕಾರಣ್ಯವಾಸಿಗಳು ಶ್ರೀರಾಮನನ್ನು ಸತ್ಕರಿಸಿದುದು, ಶರಭಂಗ, ಸುಧರ್ಮ ಅಗಸ್ತ್ಯಾಶ್ರಮ ಪ್ರವೇಶ, ಪಂಚವಟೀವಾಸ, ಖರದೂಷಣ, ವಿರಾಧ, ತ್ರಿಶಿರಾದಿ ರಾಕ್ಷಸರ ವಧೆ, ಮಾಯಾ ಜಿಂಕೆಯ ಸ್ವರೂಪನಾದ ಮಾರೀಚನ ಹಿಂಬಾಲಿಕೆ, ಅವನ ವಧೆ, ಆ ಸಮಯದಲ್ಲಿ ರಾವಣನಿಂದ ಸೀತಾಪಹರಣ ನಡೆದುದು, ಸೀತಾವಿಯೋಗದುಃಖದಿಂದ ಪರಿತಾಪ ಪಡುತ್ತಾ ಸೀತೆಯ ಅನ್ವೇಷಣೆ, ಜಟಾಯುವಿನಿಂದ ಶ್ರೀರಾಮನಿಗೆ ಅಪಹರಣ ವಿಚಾರವೂ ತಿಳಿದುದು, ನಂತರ ಹುಡುಕಾಟದಲ್ಲಿ ಪ್ರಯಾಣಿಸುತ್ತಿರುವಾಗ ಶಬರಿ ಆಶ್ರಮ ಪ್ರವೇಶ, ಫಲ ಸ್ವೀಕಾರ ವಿಷಯಗಳು ವರ್ಣಿತವಾಗಿವೆ.

### 4 ಕಿಷ್ಕಿಂಧಾ ಕಾಂಡ

ಶ್ರೀರಾಮನು ಸೀತಾವಿರಹದ ದುಃಖದಲ್ಲಿ ವಸಂತ ಋತುವಿನ ವರ್ಣನೆ, ಅಗ್ನಿ ಸಾಕ್ಷಿಯಾಗಿ ಸುಗ್ರೀವನೊಡನೆ ಸ್ನೇಹ, ವಾಲಿಯ ವಿಚಾರ

ಮತ್ತು ವಧೆ, ದಿಕ್ಕುದಿಕ್ಕುಗಳಲ್ಲಿ ವಾನರರಿಂದ ಸೀತಾದೇವಿಗಾಗಿ ಹುಡುಕಾಟ, ಸ್ವಯಂಪ್ರಭೆಯ ದರ್ಶನ, ವಾನರರು ಖಿನ್ನತೆಯಿಂದ ಪ್ರಾಯೋಪವೇಶಕ್ಕೆ ಯತ್ನಿಸಿದುದು, ಸಂಪಾತಿಯಿಂದ ಸೀತಾದೇವಿಯಿರುವ ಸ್ಥಳದ ಬಗ್ಗೆ ತಿಳಿವು ಮೊದಲಾದ ಪ್ರಸಂಗಗಳು ವಿವರಿತವಾಗಿವೆ.

**5 ಸುಂದರಕಾಂಡ**

ಹನುಮಂತನಿಂದ ಮೈನಾಕಪರ್ವತಕ್ಕೆ ಅಪ್ಪಳಿಕೆ, ಸುರಸಾದೇವಿಯ ಅನುಗ್ರಹ, ಸಿಂಹಿಕೆ, ಲಂಕಿಣಿಯರ ನಿಗ್ರಹ, ಲಂಕಾಪ್ರವೇಶ, ಜಂಬುಮಾಲಿ, ಭಾಸ, ಕರ್ಣ, ಮುಂತಾಗಿ ರಾಕ್ಷಸರವಧೆ, ಅಶೋಕವನದಲ್ಲಿ ಸೀತಾದೇವಿಯನ್ನು ಕಂಡು ಮುದ್ರಿಕೆಯನ್ನು ಒಪ್ಪಿಸಿದುದು, ಅಕ್ಷಕುಮಾರ ನಿಗ್ರಹ, ಇಂದ್ರಜಿತ್ತಿನ ಬಹ್ಮಾಸ್ತ್ರಕ್ಕೆ ಕಟ್ಟುಬಿದ್ದುದು, ನಂತರ ಲಂಕಾದಹನಮಾಡಿ ಸೀತಾದೇವಿಯು ಕಳುಹಿಸಿದ್ದ ಚೂಡಾಮಣಿಯನ್ನು ಶ್ರೀರಾಮನು ಸ್ವೀಕರಿಸಿದ ವಿಷಯಗಳು ವರ್ಣಿಸಲ್ಪಟ್ಟಿವೆ.

**6 ಯುದ್ಧಕಾಂಡ**

ಪರಮಪ್ರೀತಿಯಿಂದ ಶ್ರೀರಾಮನು ಹನುಮಂತನನ್ನು ಆಲಿಂಗಿಸಿ ಕೊಂಡಿದ್ದು, ಸುಗ್ರೀವ ಮತ್ತು ಸೈನ್ಯಸಮೇತ ಸಮುದ್ರತೀರವನ್ನು ಸೇರಿದುದು, ರಾವಣನ ಮಂತ್ರಾಲೋಚನೆಯ ಸಭೆ, ವಿಭೀಷಣನ ಶರಣಾಗತಿ, ಇಂದ್ರಜಿತ್ತಿನ ನಾಗಪಾಶದಿಂದ ಬಂಧನ, ಗರುಡನಿಂದ ಬಿಡುಗಡೆ, ಕಂಭಕರ್ಣ, ಅತಿಕಾಯರು ಯುದ್ಧಕ್ಕೆ ಬಂದು ಹತರಾದುದು, ಇಂದ್ರಜಿತ್ತಿನ ಬ್ರಹ್ಮಾಸ್ತ್ರದಿಂದ ಮೂರ್ಛಿತರಾದ ಸಕಲರನ್ನು ಋಷಭ ಪರ್ವತದಲ್ಲಿದ್ದ ಅಮೃತಸಂಜೀವಿನಿ ಮೊದಲಾದ ಔಷಧಿಗಳನ್ನು ತಂದು

ಬದುಕಿಸಿದುದು, ಶ್ರೀರಾಮನು ಇಂದ್ರನ ರಥಾರೋಹಣ ಮಾಡಿ ರಾವಣನೊಡನೆ ಯುದ್ಧ ಮಾಡಿದುದು, ಅಗಸ್ತ್ಯ ಮಹರ್ಷಿಗಳಿಂದ ಆದಿತ್ಯ ಹೃದಯ ಉಪದೇಶ, ಪ್ರತ್ಯಕ್ಷನಾದ ಸೂರ್ಯನ ಅನುಗ್ರಹ, ಶ್ರೀರಾಮ ರಾವಣರ ಯುದ್ಧದ ವರ್ಣನೆ, ರಾವಣಸಂಹಾರ, ವಿಭೀಷಣನಿಗೆ ಲಂಕಾರಾಜ್ಯಾಭಿಷೇಕ, ಸೀತಾದೇವಿಯ ಅಗ್ನಿಪ್ರವೇಶ, ಯಜ್ಞೇಶ್ವರನು ಪರಿಶುದ್ಧಳಾದ ಸೀತಾದೇವಿಯನ್ನು ಶ್ರೀರಾಮನಿಗೊಪ್ಪಿಸಿದುದು, ಎಲ್ಲರೂ ಅಯೋಧ್ಯೆಗೆ ಹಿಂದಿರುಗಿ ಶ್ರೀರಾಮನು ಪಟ್ಟಾಭಿಷಿಕ್ತನಾದ ವಿವರಣೆಗಳು ಅತ್ಯಂತ ವಿಷದವಾಗಿ ನಿರೂಪಿತವಾಗಿವೆ.

**7 ಉತ್ತರ ಕಾಂಡ**

ಶ್ರೀರಾಮನು ಸೀತಾದೇವಿಯನ್ನು ಅರಣ್ಯಕ್ಕೆ ಕಳುಹಿಸಿದುದು, ಲವಕುಶರ ಜನನ ಅಶ್ವಮೇಧಯಾಗ ಆಚರಣೆ, ವಾಲ್ಮೀಕಿಸಂದರ್ಶನ, ನಂತರ ಶ್ರೀರಾಮನ ಮಹಾ ಪ್ರಸ್ಥಾನವು ಚಿತ್ರಿತವಾಗಿದೆ.

**ರಚನಾ ಶೈಲಿ**

ವಾಲ್ಮೀಕಿಮುನಿಗಳ ಜೀವನವೃತ್ತಾಂತ, ಸಾಂಸಾರಿಕಸ್ಥಿತಿ ಮೊದಲಾದ ಪರಿಚಯಗಳು ಕಾಣಬರುವುದಿಲ್ಲ. ರಾಮಾಯಣದಲ್ಲಿ ತಂದೆ, ತಾಯಿ, ಗಂಡ, ಹೆಂಡತಿ, ಅಣ್ಣ, ತಮ್ಮ, ಅತ್ತೆ, ಸೊಸೆ ಮೊದಲಾದವರ ಸ್ನೇಹ ಸಂಬಂಧ, ನಡವಳಿಕೆಗಳು, ಕುಟುಂಬ ಅಂತಃಕಲಹ ವಿಚಾರಗಳು, ಕೋಪ, ತಾಪ, ಆಸೆ, ನಿರಾಸೆ, ಸುಖ, ದುಃಖ ರಾಗದ್ವೇಷ ಹೀಗೆ ಜೀವನದ ನಾನಾಸ್ತರದ ವಿಷಯಗಳು, ನಾನಾ ಸನ್ನಿವೇಶಗಳು, ವಿವಿಧ ಭಾವನೆಗಳನ್ನು ಬಹಳ ಮನೋಜ್ಞವಾಗಿ ವಾಲ್ಮೀಕಿ ಮುನಿಗಳು ಚಿತ್ರಿಸಿದ್ದಾರೆ.

ಹಾಗೆಯೇ ರಾಮಾಯಣದಲ್ಲಿ ಪ್ರಕೃತಿಯ ಉತ್ತುಂಗ ವರ್ಣನೆ ಹಾಗೂ ಸುಂದರ ಸನ್ನಿವೇಶಗಳು ಬಹಳಷ್ಟಿವೆ. ಅರಣ್ಯದಲ್ಲಿ ನೆಲೆಸಿದ್ದ ಋಷಿಗಳು ಅವರ ಜೀವನದ ರೀತಿ ನೀತಿ, ಪ್ರಕೃತಿಯ ರಮಣೀಯತೆ, ಅದರೊಟ್ಟಿಗಿನ ಜೀವನದ ಕ್ರಮ, ಹಾಗೆ ಪ್ರಕೃತಿಯ ರೌದ್ರತೆ, ಋತು ಚಕ್ರ ಪರಿವರ್ತನೆ, ಸೂರ್ಯೋದಯ, ಚಂದ್ರೋದಯ, ಮಳೆಗಾಲದಲ್ಲಿ ಮಳೆಯ ವೈಭೋಗ, ವನಗಿರಿಗಳ ಗಂಭೀರತೆ, ಮೃಗ ಪಕ್ಷಿಗಳ ವೈವಿಧ್ಯ ಸ್ವಭಾವ, ಸಮುದ್ರದ ಸೊಬಗು, ಆಕಾಶದ ಅನಂತತೆ ಹೀಗೆ ನಾನಾ ವಿಷಯಗಳು ಸುಂದರವಾಗಿ ವರ್ಣಿತವಾಗಿವೆ.

ಅಲ್ಲದೆ ಶ್ರೀರಾಮನ ಧರ್ಮನಿಷ್ಠೆ, ಸೀತೆಯ ಸೌಶೀಲ್ಯ, ಭರತನ ಭ್ರಾತೃವಾತ್ಸಲ್ಯ, ಲಕ್ಷ್ಮಣನ ಕರ್ತವ್ಯನಿಷ್ಠೆ, ಆಂಜನೇಯನ ಕಾರ್ಯದಕ್ಷತೆ, ಸುಗ್ರೀವನ ಸೌಹಾರ್ದಭಾವನೆ, ವಿಭೀಷಣನ ಭಕ್ತಿ ಮೊದಲಾದ ಮಧುರ ಗುಣಯುಕ್ತ ಸನ್ನಿವೇಶಗಳು ಬಹಳಷ್ಟಿವೆ. ಹಾಗೆಯೇ ರಾವಣ, ಕುಂಭಕರ್ಣ, ಇಂದ್ರಜಿತ್ ಮೊದಲಾದವರ ನೈಜ ಸ್ವರೂಪ, ಮನಸ್ಸಿನ ವೈಚಿತ್ರ್ಯ, ಉದ್ರಿಕ್ತಸ್ಥಿತಿಗತಿಗಳು ಯಥಾವಿಧಿ ಚಿತ್ರಿತವಾಗಿವೆ. ಯಾವುದೇ ಪಾತ್ರವಿರಲಿ ಅದರ ನೈಜ ಸ್ವರೂಪವನ್ನು ಯಥಾವತ್ತಾಗಿ ಯಾವುದೇ ಪಕ್ಷಪಾತವಿಲ್ಲದೆ ಬಹಳ ಮನೋಜ್ಞವಾಗಿ ಪ್ರಕಟಿಸಿರುವ ವಾಲ್ಮೀಕಿಮುನಿಗಳು ಮಹಾತ್ಮರೇ ಸರಿ.

# ಇತಿಹಾಸ ಸಂಸ್ಕೃತಿ

ವಂಶಪರಂಪರೆಯಿಂದ ಬಂದ ರಾಜನು ರಾಷ್ಟ್ರದ ಅಧಿಪತಿಯಾಗುತ್ತಾನೆ. ಹಿರಿಯ ಮಗನಿಗೆ ಪಟ್ಟಾಭಿಷೇಕ ಮಾಡಿ ರಾಜ್ಯಭಾರದ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸುವ ಪದ್ಧತಿ ರೂಢಿಯಲ್ಲಿತ್ತು. ಹಾಗೆಯೇ ರಾಜ್ಯಾಧಿಕಾರವನ್ನು ವಹಿಸುವಾಗ ಸಮಾಲೋಚಿಸಿ ನಿರ್ಧರಿಸುತ್ತಿದ್ದರು. ಇದು ಪ್ರಜಾಪ್ರಭುತ್ವವೇ ಸರಿ. ಪ್ರಜೆಗಳ ಅಭಿಪ್ರಾಯಕ್ಕೆ ಸಂಪೂರ್ಣ ಮನ್ನಣೆಯಿತ್ತು, ರಾಜನಾದರೂ ಪ್ರಜೆಗಳ ಅಭಿಪ್ರಾಯಕ್ಕೆ ತಲೆಬಾಗಿ ರಾಜ್ಯಭಾರ ಮಾಡುತ್ತಿದ್ದನು. ರಾಜನ ರಾಜಕೀಯ ಜೀವನವು ವೈಯಕ್ತಿಕ ಜೀವನವು ಬೇರೆ ಬೇರೆಯಾಗುತ್ತಿರಲಿಲ್ಲ. ರಾಜ್ಯಭಾರದಲ್ಲಿ ಸಂಪೂರ್ಣ ಪಾರದರ್ಶಕತೆ ಇತ್ತು. ರಾಜನ ವೈಯಕ್ತಿಕ ಜೀವನವು ತೆರೆದ ಪುಟವೇ ಆಗಿದ್ದಿತು. ಎಲ್ಲ ರೀತಿಯ ನೈತಿಕ ಪ್ರಜ್ಞೆಯಿಂದ ರಾಜ್ಯಭಾರ ಮಾಡುತ್ತಿದ್ದನು. ಇದೇ ರಾಮಾಯಣದ ರಾಜ್ಯಭಾರ ವೈಶಿಷ್ಟ್ಯ. ಸಂತಾನಾಪೇಕ್ಷೆಯಿಂದ ದಶರಥನಾದರೋ ಪುತ್ರಕಾಮೇಷ್ಟಿ ಯಾಗವನ್ನಾಚರಿಸಿದ. ಸ್ವತಃ ರಾಜನಾಗಿ ಬ್ರಹ್ಮಜ್ಞಾನದ ಹಂಬಲದಿಂದ ದೀರ್ಘ ತಪಸ್ಸುಗೈದು ಬ್ರಹ್ಮರ್ಷಿಯಾದ ಧೀಮಂತ ವಿಶ್ವಾಮಿತ್ರ ಮಹರ್ಷಿ, ಪ್ರಪಂಚದ ಆಗುಹೋಗುಗಳ ಸಮಗ್ರ ಚಿತ್ರಣವನ್ನು ಕಾಣುವಂತಹ ದಿವ್ಯಜ್ಞಾನದ ಮಹಾಜ್ಞಾನಿ ಮಹರ್ಷಿ ವಿಶ್ವಾಮಿತ್ರ. ಸ್ವತಃ ಎಲ್ಲವನ್ನು ನಿಗ್ರಹಿಸಬಲ್ಲ ದಿವ್ಯಶಕ್ತಿಯಿದ್ದರೂ ತಾವು ನಿಮಿತ್ತರಾಗಿ ರಾಮಲಕ್ಷ್ಮಣರಿಗೆ

ಸಂಪೂರ್ಣವಾದ ಲೋಕೋತ್ತಮವಾದ ವಿದ್ಯೆಯನ್ನು ಕಲಿಸಿ ಬೆಳೆಸಿ ಶಿಷ್ಯ ಕಾಮೇಷ್ಟಿಯನ್ನು ಆಚರಿಸಿದ ಮಹಾಶಕ್ತಿ ವಿಶ್ವಾಮಿತ್ರ.

ಶಿಲ್ಪಿಯು ಕಲ್ಲನ್ನು ಕಡೆದು ದಿವ್ಯ ಸುಂದರಮೂರ್ತಿಯನ್ನು ಪ್ರಕಟಿಸುವಂತೆ ರಾಮನಿಗೆ ಲೋಕದ ಎಲ್ಲಾ ರೀತಿಯ ವ್ಯವಹಾರಗಳನ್ನು ಬೋಧಿಸಿ ತದೇಕ ಚಿತ್ತ ತನ್ಮಯತೆ, ಕಾರ್ಯದಲ್ಲಿ ಚಾಕಚಕ್ಯತೆ, ಸಾರಾಸಾರ ವಿಚಾರ, ಸಹಾಯಪರಜೀವನ, ಅನ್ಯಸುಖಚಿಂತನೆ, ಹೀಗೆ ಪರೋಪಕಾರಕ್ಕಾಗಿಯೇ ಶರೀರವೆಂಬ ದಿವ್ಯ ಮಂತ್ರದ ಬೋಧನೆಯ ಮೂಲಕ ಧರ್ಮವನ್ನು ಸಾರವತ್ತಾಗಿ ಬೋಧಿಸಿ, ಅರ್ಥೈಸಿ, ರೂಪಿಸಿದ ಮಹಾಗುರು ವಿಶ್ವಕ್ಕೆ ಮಿತ್ರರಾದ ವಿಶ್ವಾಮಿತ್ರರು. ಮಾಡಬೇಕಾದುದನ್ನು ಆಡದೇ ಮಾಡಿ ತೋರಿಸುವುದು ಮಂತ್ರ, ಹೀಗೆ ವಿಶ್ವಾಮಿತ್ರರು ಕೇವಲ ಮಾತನಾಡದೆ ಮಾಡಿ ತೋರಿಸಿ ದಿವ್ಯ ಸುಂದರನಾದ ಶ್ರೀರಾಮನನ್ನು ಕರುಣಿಸಿದರು.

ಇದೇ ನಿಜವಾದ ಗುರುವಿನ ಕರ್ತವ್ಯ. ರಾಮನ ಕಾಲದಲ್ಲಿ ಪ್ರಜೆಗಳು ಸುಖ ಸಂತೋಷದಿಂದ ಇದ್ದರು. ಕಾಲಕಾಲಕ್ಕೆ ಮಳೆ, ಋತುವಿನ ಬದಲಾವಣೆಯಲ್ಲಿ ಎಲ್ಲ ರೀತಿಯ ಹಿತಕರ ವಾತಾವರಣವಿತ್ತು. ಸಂತೋಷಭರಿತರಾದ ಪ್ರಜೆಗಳಲ್ಲಿ ಶಾಂತಿ ಸಮಾಧಾನವಿತ್ತು. ಪ್ರಜೆಗಳ ಶಾಂತಿಯಿಂದ ದೇಶವು ಸಮೃದ್ಧವಾಗಿತ್ತು. ಶಾಂತಿ ನೆಲೆಸಿತ್ತು. ರಾಜ್ಯವು ಸುಭಿಕ್ಷವಾಗಿತ್ತು. ನಾಯಕತ್ವವೂ ಉತ್ತಮವಾಗಿತ್ತು. ಉತ್ತಮ ರಾಜನಿಂದ ಉತ್ತಮ ರಾಜ್ಯವೋ, ಉತ್ತಮ ರಾಜ್ಯದಿಂದ ಉತ್ತಮ ರಾಜನೋ, ರಾಮರಾಜ್ಯದ ಆನಂದ ಲಹರಿ ತುಂಬಿ ತುಳುಕುತ್ತಿತ್ತು.

ಪ್ರಸ್ತುತ ದೇಶದಲ್ಲಿ ಉತ್ತಮ ನಾಯಕತ್ವ ಹಾಗೂ ಶಾಂತಿ ನೆಲಸಬೇಕು. ಎಲ್ಲ ರೀತಿಯ ಶಾಂತಿಯಿಂದ ದೇಶವು ಸಮೃದ್ಧವಾಗಬೇಕು. ಕೇವಲ ಕ್ರಾಂತಿಯಿಂದ ಶಾಂತಿ ನೆಲೆಸುವುದಿಲ್ಲ. ಸಂಪೂರ್ಣ ಶಾಂತಿ ಹಾಗೂ ಮಾನಸಿಕ, ದೈಹಿಕ, ಹಿಂಸಾರಹಿತವಾದ ಜೀವನವನ್ನು ಪ್ರಜೆಗಳೆಲ್ಲಾ ರೂಢಿಸಿ ಕೊಂಡರೆ ರಾಮರಾಜ್ಯದ ಕನಸು ನನಸಾಗುವುದರಲ್ಲಿ ಸಂದೇಹವೇ ಇಲ್ಲ. ರಾಮರಾಜ್ಯ ಕೇವಲ ಬಯಕೆಯಲ್ಲಿ ಮಾತ್ರವೇ ಇರದೆ ಕೃತಿಯಲ್ಲಿ ಅಳವಡಿಸಿಕೊಳ್ಳುವುದು ಎಲ್ಲಾ ಪ್ರಜೆಗಳ ಕರ್ತವ್ಯ. ಆಗ ರಾಜ್ಯಾಧಿಪತಿಯು ರಾಮನಾಗುತ್ತಾನೆ. ರಾಜ್ಯ ರಾಮರಾಜ್ಯ ಆಗುತ್ತದೆ. ಇದುವೇ ನಿಜವಾದ ರಾಮಾಯಣ.

ಬಹುತೇಕ ಕವಿಕೋವಿದರ ಸಾಹಿತ್ಯ ವಿಕಸನಕ್ಕೆ ರಾಮಾಯಣ ಮತ್ತು ಮಹಾಭಾರತವೇ ಗ್ರಾಸ. ಇದಕ್ಕೆ ಪ್ರಧಾನ ಕಾರಣ ಭಾರತೀಯರ ಗೌರವಾದರಕ್ಕೆ ಈ ಎರಡು ಕಾವ್ಯಗಳು ಪಾತ್ರವಾಗಿರುವುದೇ ಆಗಿದೆ. ರಾಮಾಯಣ ಕವಿಪ್ರತಿಭಾನಿರ್ಮಿತ, ವರ್ಣನಾಪ್ರಧಾನ, ಉಪದೇಶವು ಗೌಣ, ವ್ಯಕ್ತಿಗಳು ಪರಿಮಿತ, ಪರಂಪರಾಸಿದ್ಧವಾದ ಧರ್ಮದ ಚೌಕಟ್ಟನ್ನು ಚೆನ್ನಾಗಿ ಬಲ್ಲವರು ಹಾಗೂ ಶ್ರದ್ಧೆಯಿಂದ ಅದನ್ನು ಪಾಲಿಸುವ ಯತ್ನದವರು. ರಾಮಾಯಣವು ಶರತ್ಕಾಲದ ತುಂಬಿ ಹರಿಯುವ ನದಿಯಂತೆ ಹಾಗೂ ಸರೋವರದಷ್ಟು ಗಾತ್ರ. ರಾಮಾಯಣ ಹೃದಯಕ್ಕೆ ಬಹಳ ಆಪ್ಯಾಯಮಾನ.

ಮಹಾಭಾರತ ಅತಿಶಯಪ್ರಜ್ಞಾವಿಲಾಸ ಹಾಗೂ ಕಥಾ ಪ್ರಧಾನವಾದುದು. ಇಲ್ಲಿ ಉಪದೇಶಕ್ಕೆ ಪ್ರಾಮುಖ್ಯ. ವ್ಯಕ್ತಿಗಳು ಅಪರಿಮಿತ, ಧರ್ಮವನ್ನು ಸ್ವಬುದ್ಧಿಮತ್ತೆಯಲ್ಲಿ ವಿವೇಚಿಸಿ ಕಾರ್ಯಪ್ರವೃತ್ತರಾಗುತ್ತಾರೆ.

ಗಾತ್ರದಲ್ಲಿ ಹಿಂದೂ ಮಹಾಸಾಗರದಂತೆ ಹಾಗೂ ವರ್ಷಾಕಾಲದ ಭೋರ್ಗರೆಯುವ ಮಹಾನದಿಯಂತೆ. ಭಾರತವು ಬುದ್ಧಿಗೆ ತೇಜೋವಿಧಾನ. ಇಲ್ಲಿ ಚಿತ್ತ ವಿಸ್ತಾರ ಚಿಂತನೆಗೆ ಎಲ್ಲೆಯಿಲ್ಲದ ವಿಸ್ತಾರವುಂಟು. ನಾನಾ ವ್ಯಕ್ತಿಗಳ ವೈವಿಧ್ಯಮಯ ರೀತಿನೀತಿಯ ತುಂಬು ಜೀವನದ ವಿಚಾರಗಳು ಮಹಾಭಾರತದಲ್ಲಿ ಪ್ರಕಟವಾಗಿರುವುದು. ಹಾಗಾಗಿ ಅನೇಕರು ತಮ್ಮ ಜೀವನ ಮಾರ್ಗದ ಪ್ರತಿರೂಪವನ್ನು ಇಲ್ಲಿ ಕಾಣುವರು.

ರಾಮಾಯಣವೇ ಇರಲಿ, ಮಹಾಭಾರತವೇ ಇರಲಿ, ಅದು ಮಹಾಕಾವ್ಯ, ಇತಿಹಾಸ ರೂಪದಲ್ಲಿ ಕಂಡರೂ, ಅದಕ್ಕೂ ಮಿಗಿಲಾಗಿ ನಿತ್ಯ ಜೀವನದ ಸತ್ಯಾಸತ್ಯತೆಯು ಅಲ್ಲಿ ಶೋಭಿತವಾಗಿರುವುದು. ಸೂರ್ಯಚಂದ್ರರು ಹೇಗೆ ಯಾವಜ್ಜೀವವೂ ಪ್ರಕಾಶಿತರೋ ಹಾಗೇ ಕೇವಲ ಭಾರತೀಯರಿಗೆ ಏಕೆ, ವಿಶ್ವಾದ್ಯಂತ ಎಲ್ಲ ಜೀವಿಗಳಿಗೂ ಸಾರ್ವಕಾಲಿಕ ಸತ್ಯವನ್ನು ಪ್ರತಿಬಿಂಬಿಸುತ್ತಿರುವುದರಿಂದ ಸರ್ವಾದರಣೀಯವಾಗಿವೆ, ನೀತಿಯುತಬಾಳ್ವೆಯ ಲಕ್ಷಣ, ಅದರಿಂದ ಸಿಗುವ ಮಾನಸಿಕ ನೆಮ್ಮದಿ, ಶಾಂತಿ, ಸುಖಪ್ರದಚಿಂತನೆ, ಉತ್ತಮ ಆರೋಗ್ಯ, ಆಧ್ಯಾತ್ಮಿಕ ಆಧಿದೈವಿಕ ಹಾಗೂ ಆಧಿಭೌತಿಕ ವಿಚಾರಗಳಲ್ಲಿ ಶಾಂತಿಯನ್ನು ಸದಾ ಕರುಣಿಸುವಂತಹ ನಿತ್ಯ ಜೀವನದ ನಾನಾ ಮಜಲುಗಳು ಕಥಾರೂಪದಲ್ಲಿ ಸರ್ವರಿಗೂ ಮನದಟ್ಟಾಗುವಂತೆ ವರ್ಣಿತವಾಗಿರುವುದು ಈ ಉದ್ಗ್ರಂಥಗಳ **ವೈಶಿಷ್ಟ್ಯ**.

ಸುಖ ಸಮೃದ್ಧಿ, ನೆಮ್ಮದಿ, ಶಾಂತಬದುಕನ್ನು ಎಲ್ಲರೂ ಬಯಸುತ್ತೇವೆ. ಆದರೆ ಅದಕ್ಕೆ ಪೂರಕವಾದ ವಿಚಾರಗಳನ್ನು ಜೀವನ

ಕ್ರಮದಲ್ಲಿ ರೂಢಿಸಿಕೊಳ್ಳಲು ವಿಫಲರಾಗುತ್ತೇವೆ. ಹಲ ಕೆಲವು ಕಠಿಣತೆಯು ಎದುರಾಗುತ್ತದೆ. ಅದನ್ನು ತಾಳ್ಮೆಯಿಂದ ಎದುರಿಸಲು ಅಶಕ್ತರಾಗುತ್ತೇವೆ.

ಪರಿಣಾಮ ದುಃಖ, ಕಷ್ಟ, ನೋವು, ಅಶಾಂತಿ ಇತ್ಯಾದಿಗಳಿಂದ ತೊಳಲಾಡುತ್ತೇವೆ. ಹೀಗೆ ನಾನಾ ಸಂಕಷ್ಟಗಳಿಗೆ ಪರಿಹಾರ ಮಾರ್ಗೋಪಾಯಗಳನ್ನು ರಾಮಾಯಣ ಮಹಾಭಾರತದಲ್ಲಿ ನಾವು ಕಾಣಬಹುದು. ಅದರಿಂದ ಜೀವನದ ಉತ್ತಮತೆಯನ್ನು ಸಾಧಿಸಿ ಜನ್ಮವನ್ನು ಸಾರ್ಥಕ್ಯಪಡಿಸಿಕೊಳ್ಳಬಹುದು.

## ಮಹಾಭಾರತ

ತ್ರೇತಾಯುಗದಲ್ಲಿ ರಾಮಾಯಣವೂ, ದ್ವಾಪರಯುಗದಲ್ಲಿ ಮಹಾಭಾರತವೂ ನಡೆಯಿತೆಂಬುದು ಭಾರತೀಯರ ನಂಬಿಕೆ. ವ್ಯಾಸಮುನಿಗಳಿಂದ ರಚಿತವಾದ ಭಾರತ ಕಾವ್ಯ ಶಾಸ್ತ್ರಗಳ ಸಂಗಮ ವಿಚಾರ, ಆಕಾರ ಎಲ್ಲದರಲ್ಲೂ ಮಹಾಸ್ಥಾನ ಹೊಂದಿರುವುದರಿಂದ ಮಹಾಭಾರತವಾಗಿದೆ. ಇದನ್ನು ಪಂಚಮವೇದವೆಂದೂ ಕರೆಯುತ್ತಾರೆ. ನಾಲ್ಕೂ ವೇದದ ವಿಚಾರವನ್ನು ಸವಿಸ್ತಾರವಾಗಿ ಸುಲಭವಾಗಿ ಎಲ್ಲರೂ ಅರ್ಥೈಸಿಕೊಳ್ಳುವಂತಹ ಆಖ್ಯಾನ ಉಪಾಖ್ಯಾನಗಳೊಂದಿಗೆ ಇದು ಪ್ರಕಟಿತವಾಗಿದೆ. ಇದು ಕೇವಲ ಕಾವ್ಯವಷ್ಟೇ ಅಲ್ಲ. ಇದರಲ್ಲಿ ಇಲ್ಲದ ವಿಷಯವೇ ಇಲ್ಲ. ಮಹಾಭಾರತದಲ್ಲಿ ಏನಿದೆ? ಎನ್ನುವುದಕ್ಕಿಂತ ಏನಿಲ್ಲ? ಎಂದು ಹುಡುಕುವುದೇ ಕಷ್ಟ. ಇಷ್ಟು ಸವಿಸ್ತಾರವಾದ ಇನ್ನೊಂದು ಗ್ರಂಥ

ಈಪ್ರಪಂಚದ ಇತಿಹಾಸದಲ್ಲೇ ಇಲ್ಲ. ಇತಿಹಾಸವೆಂಬುದು ಇತಿ + ಹ + ಆಸ ಎಂಬ ಶಬ್ದಗಳಿಂದ ಆಗಿದೆ. ಇದರ ಅರ್ಥ, ಈ ಪ್ರಕಾರ ಇದ್ದಿತು (ಇದ್ದನು).

ಹಿಂದೆ ನಡೆದ, ಅನಾದಿ ಪರಂಪರೆಯಿಂದ ಬಂದ, ಸೂಕ್ತವಾದ ಉಪದೇಶವನ್ನು ಜನಸಾಮಾನ್ಯರಿಗೂ ತಿಳಿಯುವ ಹಾಗೆ, ಹಿಂದೆ ನಡೆದುಹೋದ ವ್ಯಕ್ತಿ/ಸಮಾಜದ ಜೀವನ ಆದರ್ಶ, ಜೀವನಕ್ರಮ ಇತ್ಯಾದಿ ಪ್ರಕಾರವನ್ನು ಯಥಾರ್ಥವಾಗಿ ಮಹಾಭಾರತದಲ್ಲಿ ನಿರೂಪಿಸಿರುವುದೇ ಆಗಿದೆ. ಶ್ರುತಿ ಸ್ಮೃತಿಗಳಲ್ಲಿ ಅಡಗಿರುವ ಗೂಢಾರ್ಥವನ್ನು ಸುಲಭವಾಗಿ ಕಥಾರೂಪದಲ್ಲಿ ಮಹಾಭಾರತ ಪ್ರತಿಬಿಂಬಿಸಿದೆ. ವಿವಿಧ ಆಖ್ಯಾನೋಪಾಖ್ಯಾನಗಳು, ಧರ್ಮಾಧರ್ಮವಿಚಾರ, ನೀತಿಬೋಧೆ, ಜೀವನಾದರ್ಶ ಹೀಗೆ ಅನೇಕಾನೇಕ ಪ್ರಸಂಗಗಳು ಸೇರಿ ಗ್ರಂಥ ವಿಸ್ತಾರಕ್ಕೆ ಕಾರಣವಾಗಿವೆ. ಮಹಾಭಾರತವು 18 ಪರ್ವಗಳಿಂದಲೂ ಒಂದು ಲಕ್ಷ ಶ್ಲೋಕಗಳನ್ನೊಳಗೊಂಡು ಶತಸಾಹಸ್ರೀಸಂಹಿತಾ ಎಂದು ಬಿರುದಾಂಕಿತವಾಗಿದೆ. ಸಾಹಿತ್ಯಪ್ರಪಂಚದಲ್ಲಿ ಇದು ಹಿಂದೂ ಮಹಾಸಾಗರವೇ ಸರಿ. ವಿಶ್ವಮಾನ್ಯವಾದ ಗೀತಾಚಾರ್ಯ ಶ್ರೀಕೃಷ್ಣನಿಂದ ಬೋಧಿತವಾದ ಭಗವದ್ಗೀತೆಯು ಇದರಲ್ಲಿ ಅಡಕವಾಗಿದೆ.

ಭಾರತದ ಆರಂಭ ಮಂಗಳ ಶ್ಲೋಕದಲ್ಲಿ

**ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್।**

**ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್॥**

ಈ ಶ್ಲೋಕದ ಬಗ್ಗೆ ಮನನ ಮಾಡುವ. ವಿಶ್ವಗುರುವಾದ ನಾರಾಯಣ, ವಾಕ್ಯಕ್ತಿರೂಪಿಣಿಯಾದ ಸರಸ್ವತಿಯಾದಿ ನಮಸ್ಕರಿಸಿ ಜಯವನ್ನು ಪ್ರಸ್ತಾಪಿಸುವೆ ಎಂದಿದೆ. ಕವರ್ಗಾದಿ ಜಕಾರವು 8ನೆಯ ಅಕ್ಷರ ಯಕಾರಾದಿ ವ್ಯಂಜನಗಳಲ್ಲಿ ಯಕಾರವು 1ನೆಯ ಅಕ್ಷರ ಜಯವನ್ನು ಸಂಖ್ಯೆಯಲ್ಲಿ ಬರೆದಾಗ ಜಯ 8,1 ಎಂದಾಗುತ್ತದೆ. ಅಂಕಾನಾಂ ವಾಮತೋಗತಿ ಎಂಬ ಸೂತ್ರದಂತೆ ಹಿಂದೆ ಮುಂದೆ ಮಾಡಿದಾಗ, 8, 1

1,8 ಆಗುತ್ತದೆ. ಮಹಾಭಾರತದಲ್ಲಿ ಒಟ್ಟು 18 ಪರ್ವಗಳು. ಭಾರತದ ಯುದ್ಧ 18 ದಿನ ನಡೆಯಿತು. 18 ಜನ ಅತಿರಥ ಮಹಾರಥರು, 18 ಅಕ್ಷೋಹಿಣೀ ಸೈನ್ಯ, ಭಗವದ್ಗೀತೆಯಲ್ಲಿ 18 ಅಧ್ಯಾಯ ಹೀಗೆ 18ರ ಪ್ರಾಬಲ್ಯ ತುಂಬಿರುವುದು ಗಮನಾರ್ಹ. ಎಲ್ಲಿ ಧರ್ಮವೋ ಅಲ್ಲಿ ಜಯವೆಂಬಂತೆ ನೀತಿಯುತ ಸತ್ಯಪಾಲಕ ಧರ್ಮಜಾದಿ ಪಾಂಡವರಿಗೆ ಇಲ್ಲಿ ಜಯ. ಹಾಗಾಗಿಯೇ ಜಯವೆಂಬುದು ಅನ್ವಯವಾಗುತ್ತದೆ. 1 8ನ್ನುಕೂಡಿದಾಗ 9ಆಗುತ್ತದೆ. ಇದು ಪೂರ್ಣಾಂಕ. ಹಾಗಾಗಿ ನಡೆಯು ಎಂದಿಗೂ ಪೂರ್ಣದೆಡೆಗೆ ಸಾಗುತ್ತಿರಬೇಕು.

ಭರತವಂಶದ ಚಕ್ರವರ್ತಿ ಧರ್ಮರಾಯನ ಹಾಗೂ ಇತರ ರಾಜರ ಕಥೆಗಳು ವರ್ಣಿತವಾಗಿರುವುದರಿಂದ ಭಾರತವೆಂದಾಗಿದೆ.

ರಾಮಾಯಣದ ಹಾಗೆ ಇಲ್ಲಿಯೂ ಬ್ರಹ್ಮನು ವ್ಯಾಸರಿಗೆ ದರ್ಶನವಿತ್ತು, ಆಶೀರ್ವದಿಸಿ ಗ್ರಂಥ ರಚನೆಯಲ್ಲಿ ಉದ್ಯುಕ್ತನಾಗಲು ತಿಳಿಸಿದಾಗ ತನ್ನ ವಿಚಾರಧಾರೆಯನ್ನು ಸೂಕ್ಷ್ಮವಾಗಿ ಬರೆಯುವ ಲೇಖಕನು

ದೊರೆತಿಲ್ಲ ಎಂದು ತಿಳಿಸುತ್ತಾನೆ. ಆಗ ಬ್ರಹ್ಮನು ಗಣಪತಿಯನ್ನು ಸ್ಮರಿಸು ಎಂದು ಸೂಚಿಸುತ್ತಾನೆ. ಅದರಂತೆ ಗಣಪತಿಯನ್ನು ಸ್ಮರಿಸಿ ಆತನಲ್ಲಿ ವಿಷಯವನ್ನು ತಿಳಿಸಿದಾಗ ಗಣಪತಿಯು ಅದಕ್ಕೆ ಸಮ್ಮತಿಸಿ ಒಂದು ಷರತ್ತು ಇಡುತ್ತಾನೆ. ಅದೇನೆಂದರೆ ತಾನು ಬರೆಯುವಾಗ ಲೇಖನಿಗೆ ಸ್ವಲ್ಪವೂ ವಿರಾಮವಿರದೆ ನಿರಂತರವಾಗಿ ಹೇಳುತ್ತಾ ಹೋಗಬೇಕು. ಆಗಲಿಯೆಂದು ಒಪ್ಪಿದ ವ್ಯಾಸರು ಹಾಗಾದರೆ ನನ್ನ ಮಾತನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಬರೆಯಬಾರದೆಂದು ಗಣಪತಿಗೆ ಸೂಚಿಸಿದರು. ಅದಕ್ಕೆ ಒಪ್ಪಿದ. ಗಣಪತಿಯು ವ್ಯಾಸರು ಮಧ್ಯೆ ಮಧ್ಯೆ ಕೂಟ ಶ್ಲೋಕವನ್ನು ರಚಿಸಿ ಹೇಳುತ್ತಾ ಹೋದ ಹಾಗೆ ಅದರರ್ಥ ಏನೆಂದು ಗಣಪತಿಯು ಆಲೋಚಿಸಿ ಬರೆಯುವಷ್ಟರಲ್ಲಿ ವ್ಯಾಸರು ಮುಂದಿನ ಸಾವಿರಾರು ಶ್ಲೋಕವನ್ನು ಬುದ್ಧಿಸ್ಥವಾಗಿ ಸಿದ್ಧಪಡಿಸಿಕೊಳ್ಳುತಿದ್ದರು.

ಹೀಗೆ ಮಹಾಭಾರತದಲ್ಲಿ 8,800 ಕೂಟಶ್ಲೋಕಗಳಿವೆ ಎಂದು ವಿದ್ವಾಂಸರ ಅಭಿಪ್ರಾಯ. ಈ ಗ್ರಂಥದ ಗ್ರಂಥಿಯನ್ನು ಅರ್ಥೈಸಿಕೊಳ್ಳಲು ಗಣಪತಿಗೆ ಕೆಲವು ಸಮಯ ಬೇಕಾಗುತ್ತಿತ್ತು. ಹೀಗೆ ನಿರಂತರವಾಗಿ ರಚನೆ ಸಾಗಿ ಲಕ್ಷ ಶ್ಲೋಕಗಳನ್ನೊಳಗೊಂಡ ಮಹಾಭಾರತವು ರಚಿತವಾಯಿತು. ಪರಿಚಯಾರ್ಥವಾಗಿ ಕೂಟಶ್ಲೋಕವೊಂದನ್ನು ಉದಾಹರಿಸಿದೆ.

**ಮುಖೇನ ಗರ್ಭಂ ಲಭೇತಾಂ ಯುವಾನೌ ಗತಾಸು ತೇ೯ತತ್ ಪ್ರಪದೇನ ಸೂತೇ|**

**ಸದ್ಯೋಜಾತೋ ಮಾತರ ಮತ್ತಿ ಗರ್ಭಃ ತಾವಶ್ವಿನೌ ಮುಂಚಥೋ ಜವಸೇಗಾಃ||**

**(ಆದಿಪರ್ವ 2-67)**

ಇದರ ಯಥಾವತ್ತಾದ ಅರ್ಥ ಹೀಗಿದೆ.

ಇಬ್ಬರು ಯುವಕರು ಮುಖದಿಂದ ಗರ್ಭವನ್ನು ಧರಿಸಿದರು. ಮೃತನು ಇದನ್ನು ಪಾದತಲದಿಂದ ಹಡೆಯುತ್ತಾನೆ.

ಹುಟ್ಟಿದ ಕೂಡಲೇ ಶಿಶುವು ತಾಯಿಯನ್ನು ತಿಂದು ಬಿಡುತ್ತದೆ. ಅಶ್ವಿನಿ ದೇವತೆಗಳೇ ನೀವು ಜೀವನಕ್ಕಾಗಿ ಹಸುಗಳನ್ನು ಬಿಡುತ್ತೀರಿ.

ಇದೆಂತಹ ವಿಪರ್ಯಾಸ ? ಎಷ್ಟು ವಿಚಿತ್ರ? ಲೋಕದಲ್ಲಿ ಹೀಗೆ ಸಂಭವ ಉಂಟೇ? ಹೀಗೆ ಅಪ್ರಸ್ತುತ ಗೊಂದಲವಿಚಾರಗಳನ್ನು ಬಿಟ್ಟುಬೇರೇನು ವಿಷಯವು ವ್ಯಾಸರಿಗೆ ಹೊಳೆಯಲಿಲ್ಲವೇ ಮುಂತಾಗಿ ಅನೇಕಾನೇಕ ಪ್ರಶ್ನೆಗಳುಕಾಡುವುದು ಸಹಜ. ಹಾಗಾದರೆ ಇದರ ಸರಿಯಾದ ಅರ್ಥವನ್ನು ತಿಳಿಯುವುದಾದರು ಹೇಗೆ? ಎಂದಾದಾಗ ವಾಸ್ತವ ವಿಚಾರಕ್ಕೆ ಗಮನ ಹರಿಸಿದಾಗ ನೈಜ ವಸ್ತುತ್ವ ಭಾಸವಾಗುತ್ತದೆ.

ಮೇಲಿನ ಶ್ಲೋಕಕ್ಕೆ ವಾಸ್ತವಾರ್ಥವು ಹೀಗಾಗುತ್ತದೆ. ಯುವಕ ಯುವತಿಯರು ಬಾಯಿಯಿಂದ ಗರ್ಭಕ್ಕೆ ಕಾರಣವಾದ ಅನ್ನವನ್ನು ಪಡೆಯುತ್ತಾರೆ.

ಅನಂತರ ಅಚೇತನವಾದ ದೇಹವು ಈ ಗರ್ಭವನ್ನು ಯೋನಿದ್ವಾರ ಪ್ರಸವಿಸುತ್ತದೆ. ಆಗತಾನೇ ಹುಟ್ಟಿದ ಶಿಶುವು ತಾಯಿಯ ಸ್ತನ್ಯಪಾನ ಮಾಡುತ್ತದೆ. ಚೇತನ ರೂಪವಾದ ಬ್ರಹ್ಮ ವಸ್ತುವೇ ಅಶ್ವಿನಿ ದೇವತೆಗಳಾಗಿ ನನ್ನ ಜೀವನದ ನಿರ್ವಾಹಕ್ಕಾಗಿ ಕಣ್ಣುಗಳನ್ನು ದಯಪಾಲಿಸಿರಿ.

ಆದಿಪರ್ವದಲ್ಲಿ ಉಪಮನ್ಯು ಕುರುಡನಾಗಿ ಗುರೂಪದೇಶದಂತೆ ದೃಷ್ಟಿಯನ್ನು ಪಡೆಯಲು ಅಶ್ವಿನಿ ದೇವತೆಗಳನ್ನು ಉದ್ದೇಶಿಸಿ ಮಾಡಿದ ಪ್ರಾರ್ಥನೆಯಿದು.

**ಅನ್ನಾತ್ ಪುರುಷಃ** ಎಂದು ಶ್ರುತಿಯು ಸಾರುತ್ತಿದೆ. ಅನ್ನವೇ ಶುಕ್ಲ ಶೋಣಿತ ರೂಪದಿಂದ ಗರ್ಭವಾಗಿ ಪರಿಣಮಿಸುತ್ತದೆ. ಆದುದರಿಂದ ಅನ್ನವನ್ನೇ ಗರ್ಭವೆಂದಿದ್ದಾರೆ. ಸರಿಯಾಗಿ ಫಲಿತವಾದ ಗರ್ಭವು ಪಕ್ವವಾಗಿ ಯಥಾರೂಪ ಬೆಳವಣಿಗೆಯೊಂದಿಗೆ ಯೋನಿದ್ವಾರ ಹೊರಬರುತ್ತದೆ. ಜನಿತವಾದ ಶಿಶುವಿಗೆ ತಾಯಿಯ ಸ್ತನ್ಯದಲ್ಲಿರುವ ಹಾಲೇ ಆಹಾರ. ಸ್ತನ್ಯಪಾನವನ್ನು ಯಾರು ಕಲಿಸಿಕೊಡುತ್ತಾರೆ. ಇದೊಂದು ಜನ್ಮಾಂತರ ಸಂಸ್ಕಾರವಲ್ಲವೆ? ಸಂಸ್ಕಾರವು ಈ ಶರೀರಕ್ಕಷ್ಟೇ ಅಲ್ಲ. ಅನುಸ್ಯೂತವಾದ ಜೀವಾತ್ಮವು ಶರೀರವನ್ನು ಸ್ತನ್ಯಪಾನ ಮಾಡುವಂತೆ ಪ್ರೇರೇಪಿಸುತ್ತದೆ.

ಹೀಗೆ ಲಕ್ಷ ಶ್ಲೋಕದ ಮಹಾಭಾರತವನ್ನೇ ವ್ಯಾಸರು ತಮ್ಮ ಮಗನಾದ ಶುಕನಿಗೂ, ಶಿಷ್ಯರಾದ ಸುಮಂತು, ವೈಶಂಪಾಯನ, ಜೈಮಿನಿ, ಮತ್ತು ಪೈಲರಿಗೆ ಉಪದೇಶಿಸಿದರು. ವೈಶಂಪಾಯನನು ಜನಮೇಜಯನಿಗೆ ತಿಳಿಸಿದನು. ಲೋಮಹರ್ಷಣ ಮೊದಲಾದವರು ಅವನಿಂದ ಕಲಿತರು. ಇವನ ಮಗನಾದ ಉಗ್ರಶ್ರವನು ಶೌನಕಾದಿಗಳಿಗೆ ಹೇಳಿದನು. ಹೀಗೆ ಪ್ರಸ್ತುತ ಉಪಲಬ್ಧವಿರುವ ಮಹಾಭಾರತವು ವೈಶಂಪಾಯನ ಪ್ರೋಕ್ತವಾದುದು. ಜೈಮಿನಿಯ ಅಶ್ವಮೇಧ ಪರ್ವವೂ ಉಪಲಬ್ಧವಿದೆ. ಉಳಿದವು ದೊರೆತಿಲ್ಲ.

ಪಾಶ್ಚಾತ್ಯ ವಿದ್ವಾಂಸರು ನಾನಾ ವಿಚಾರಗಳನ್ನು ಮಂಡಿಸಿ ಮಹಾಭಾರತ ಕೇವಲ ಕಾಲ್ಪನಿಕ ಕವಿಕಲ್ಪಿತ. ಇದೊಂದು ಕೇವಲ ಧರ್ಮಶಾಸ್ತ್ರ, ಕ್ರಿ.ಪೂ.250 ರಿಂದ 450ರಲ್ಲಿ ರಚಿತವಾಗಿರಬಹುದು ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಅದೇನೇ ಇರಲಿ, ಸನಾತನೀಯ ಭಾರತೀಯರಿಗೆ ಇದೊಂದು ಪವಿತ್ರ ಗ್ರಂಥವೇ ಆಗಿದೆ. ಕೆಲವು ಕಡೆ ಬೃಹತ್ ಮೊದಲಾದ ಛಂದಸ್ಸು ಹಾಗೂ ಗದ್ಯಗಳಿಂದ ಯುಕ್ತವಾಗಿದ್ದರೂ, ಅನುಷ್ಟುಪ್ ಛಂದಸ್ಸಿನ ಶ್ಲೋಕಗಳೇ ಅಧಿಕವಾಗಿವೆ.

ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕುಪುರುಷಾರ್ಥಗಳಿಗೆ ಸಂಬಂಧಿಸಿದ ವಿಚಾರಪರಂಪರೆಯು ಮಹಾಭಾರತದಲ್ಲಿ ಪ್ರಕಟವಾಗಿದೆ.ಶಾಂತರಸವು ಪ್ರಧಾನವಾಗಿದ್ದರೂ, ವೀರ, ಅದ್ಭುತ, ರೌದ್ರಾದಿ ಇನ್ನಿತರ ರಸಗಳು ಅಭಿವ್ಯಕ್ತವಾಗಿವೆ. ಭೀಷ್ಮಪರ್ವದಲ್ಲಿ ಬರುವ ಭಗವದ್ಗೀತೆ ವಿಶ್ವ ವಿಖ್ಯಾತವಾಗಿದೆ. ಹಾಗೆಯೇ ಹಂಸಗೀತೆ, ಮಂಕಿಗೀತೆ, ಪಿಂಗಲಗೀತೆ, ಹಾರೀತಗೀತೆ, ಅನುಗೀತೆ ಮುಂತಾದ ಪ್ರಕರಣಗಳೂ ಇವೆ. ಸರ್ಗ 5-48 ರಲ್ಲಿ ಮೂರು ವರ್ಷದಲ್ಲಿ ಈ ಉದ್ಗ್ರಂಥವು ಕೃಷ್ಣ ದ್ವೈಪಾಯನರಿಂದ ರಚಿತವಾಯಿತು ಎಂಬ ಉಲ್ಲೇಖವಿದೆ.

ಸರ್ವಜ್ಞ, ನಾರಾಯಣ, ದೇವಬೋಧ, ಅರ್ಜುನಮಿಶ್ರ, ನೀಲಕಂಠ, ವಾದಿರಾಜ, ಚತುರ್ಭುಜ ಯಜ್ಞ ನಾರಾಯಣ ಮೊದಲಾದವರು

ಮಹಾಭಾರತ ಕುರಿತು ಬರೆದ ಸುಮಾರು 22 ವ್ಯಾಖ್ಯಾನಗಳಿವೆ. ಭಾರತ ತಾತ್ಪರ್ಯ ನಿರ್ಣಯವೆಂಬ ಗ್ರಂಥವನ್ನು ಅಪ್ಪಯ್ಯ ದೀಕ್ಷಿತ, ಮಧ್ವಾಚಾರ್ಯ, ವರದರಾಜರು ಸ್ವತಂತ್ರವಾಗಿ ಬರೆದಿದ್ದಾರೆ. ಇದಲ್ಲದೇ ಪುರಾಣಂ ಹಯಗ್ರೀವ ಶಾಸ್ತ್ರಿಗಳ ಅದ್ವೈತ ಸಿದ್ಧಾಂತದ ಭಾರತ ತತ್ತ್ವವಾಚನ, ಕ್ಷೇಮೇಂದ್ರನ ಭಾರತ ಮಂಜರಿ, ಅನಂತ ಭಟ್ಟನ ಭಾರತ ಚಂಪೂ, ಮೊದಲಾದ ನಾಟಕಗಳು, ವೇಣೀ ಸಂಹಾರ, ಬಾಲಭಾರತ, ಪಾಂಡವಾಭ್ಯುದಯ ಮುಂತಾದ ರೂಪಕಗಳೂ, ನೈಷಧ ಮುಂತಾದ ಕಾವ್ಯಗಳೂ ಹೀಗೇ ಕಾವ್ಯ ಪ್ರಪಂಚದ ನಾನಾಮುಖ ಕಮಲಗಳಿಂದ ಮತ್ತಷ್ಟು ವೈಭವೀಕರಿಸಿ ಇನ್ನೂ ಶೋಭಿತವಾಗಿ ಮಹಾಭಾರತವನ್ನು ಸಾಹಿತ್ಯ ವೈಶಾಲ್ಯದಿಂದ ತುಂಬಿ ತುಳುಕಾಡುವಂತೆ ಮಾಡಿವೆ. ಕಾಳಿದಾಸನ ಸುಪ್ರಸಿದ್ಧ ಶಾಕುಂತಲವೂ ಭಾರತವನ್ನೇ ಆಶ್ರಯಿಸಿದೆ.

ಜೈನ ಮತಾನುಸಾರವಾಗಿ ಭಾರತವನ್ನು ಜೈನ ಕವಿಗಳು ರಚಿಸಿದ್ದಾರೆ. ಮುಖ್ಯವಾಗಿ ಹೆಸರಿಸಬಹುದಾದುದು ವಿಮಲ ಸೂರಿಯ ಹರಿವಂಶ ಚರಿತೆ, ಜಿನಸೇನನ ಹರಿವಂಶ, ಸುಭದ್ರಾಚಂದ್ರನ ಬೃಹತ್ಪಾಂಡವಪುರಾಣ, ವಾದಿಚಂದ್ರನ ಪಾಂಡವಪುರಾಣ, ದೇವಪ್ರಭಾಸೂರಿಯ ಪಾಂಡವ ಚರಿತ್ರೆ, ಪಂಪಮಹಾಭಾರತ (ವಿಕ್ರಮಾರ್ಜುನ ವಿಜಯಂ) ರನ್ನನ ಗದಾಯುದ್ಧ ಮೊದಲಾದವು. ಜೈನರೂ ಕೂಡ ಹರಿವಂಶವನ್ನು ಭಾರತದ ಅಂಗವೆಂದು ಪರಿಗಣಿಸಿದ್ದಾರೆ.

ಮಹಾಭಾರತ ಕೇವಲ ಭಾರತದಲ್ಲಷ್ಟೇ ಅಲ್ಲ, ಬಹಳಷ್ಟು ಕಡೆ ವ್ಯಾಪಿಸಿದೆ. ಹರಿವಂಶ ಸಹಿತವಾದ ಮಹಾಭಾರತವು ಜಾವಾ ಮತ್ತು ಬಾಲೀ ದ್ವೀಪಗಳಲ್ಲಿ ಭಾಷಾಂತರದಲ್ಲಿ ಉಪಲಬ್ಧವಿತ್ತು. ಟಿಬೆಟ್ಟಿನಲ್ಲಿ ಟಿಬೆಟ್ ಭಾಷೆಗೆ ಪರಿವರ್ತಿತವಾದ ಭಾರತವು ದೊರೆತಿದೆ.

ಕಾಂಬೋಡಿಯಾದ ಲಾವೇಸಿನ ರಾಜ ಸೋಮಶರ್ಮನು ದೇವಾಲಯಗಳನ್ನು ಕಟ್ಟಿಸಿ ರಾಮಾಯಣ, ಭಾರತ ಮತ್ತಿತರ ಪುರಾಣ ಪುಸ್ತಕಗಳನ್ನು ದಾನಮಾಡಿ, ಪ್ರತಿನಿತ್ಯ ಪಾರಾಯಣವನ್ನೇರ್ಪಡಿಸಿದ್ದನೆಂದು ಶಿಲಾಶಾಸನಗಳಿಂದ ತಿಳಿದು ಬಂದಿದೆ.

ಮಹಾಭಾರತವು ವೈದಿಕಸಂಸ್ಕೃತಿಯ ಉಪಬೃಂಹಣ, ವೈದಿಕ ಪ್ರಪಂಚದ ಉದಾತ್ತ ವಿಷಯಗಳನ್ನು ಜನ ಸಾಮಾನ್ಯರೂ ಅತ್ಯಂತ ಸುಲಭವಾಗಿ ಅರ್ಥೈಸಿಕೊಳ್ಳುವ ಹಾಗೆ ಅನೇಕ ದಾರ್ಶನಿಕ ವಿಚಾರ ಸರಣಿಯನ್ನು ಧಾರ್ಮಿಕ ಜೀವನದ ಮೇಲೆ ಪ್ರಭಾವವನ್ನು ಬೀರಿ ಸಮೃದ್ಧ ಜೀವನದ ಸುಪಥವನ್ನು ಬೋಧಿಸುವ ಮಹಾಗ್ರಂಥ.

ಭಾರತಕಥೆಯ ಪರಿಚಯವಿಲ್ಲದ ಭಾರತೀಯರೇ ಇಲ್ಲವೆನ್ನಬಹುದು. ದೇವಸ್ಥಾನ ಮುಂತಾಗಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರವಚನ ಪ್ರಹಸನ ಮಾಡುವ ಪದ್ಧತಿ ಹಿಂದಿನಿಂದಲೂ ಇದೆ. ಭಾರತೀಯರ ಗೌರವಾದರಗಳಿಗೆ ಪಾತ್ರವಾದ್ದರಿಂದಲೇ ಭಾಸ ಕಾಳಿದಾಸಾದಿ ಕವಿ ಶ್ರೇಷ್ಠರು ಭಾರತ ಕಥಾವಸ್ತುವನ್ನವಲಂಭಿಸಿ ಸಾಹಿತ್ಯ ಸಂಪತ್ತನ್ನು ಬೆಳೆಸಿದರು.

ಪ್ರಧಾನವಾಗಿ ಭಾರತದಲ್ಲಿರುವುದು ಕುರು ಪಾಂಡವರ ಯುದ್ಧ ಕತೆ. ದ್ರೌಪದಿ ಸ್ವಯಂವರ ಪ್ರಸಂಗದಿಂದ ಮೂಲಾಧಾರ ಪುರುಷನಾದ ಶ್ರೀ ಕೃಷ್ಣನ ಪ್ರವೇಶವಾಗುತ್ತದೆ. ಕುರುವಂಶದ ಹಿರಿಯರಾದ ಧೃತರಾಷ್ಟ್ರ, ಭೀಷ್ಮ, ಗುರುಗಳಾದ ದ್ರೋಣಾಚಾರ್ಯ, ಕೃಪಾಚಾರ್ಯ, ಮುಂತಾದವರಿದ್ದಾಗ್ಯೂ, ಪಾಂಡವರಿಗೆ ಅನ್ಯಾಯವಾಗುತ್ತಿದೆ ಎಂಬುದನ್ನು ಅರಿತ ಶ್ರೀಕೃಷ್ಣನು ಧರ್ಮಭೀರುಗಳಾದ ಪಾಂಡವರ ಪಕ್ಷ ವಹಿಸುತ್ತಾನೆ.

ಧರ್ಮವನ್ನು ಎತ್ತಿಹಿಡಿಯಬೇಕೆಂದು ನಿಷ್ಣಾತನಾದ ಕರ್ಮಯೋಗಿ ಶ್ರೀ ಕೃಷ್ಣನು ಪಾಂಡವರಿಗೆ ಬೆಂಬಲಿಗನಾಗಿ ಧರ್ಮರಾಜ್ಯವನ್ನು ಸ್ಥಾಪಿಸುವ ಧ್ಯೇಯದಿಂದ ಉಪಾಯವನ್ನು ಹೂಡಿದನು. ಸಾಮ, ದಾನ, ಭೇದೋಪಾಯಗಳಿಂದ ಕೌರವರನ್ನು ಸರಿ ಮಾರ್ಗಕ್ಕೆ ತರಲಾಗಲಿಲ್ಲ. ಆಗ ದಂಡೋಪಾಯವನ್ನು ಅವಲಂಬಿಸುವ ಪರಿಸ್ಥಿತಿ ಉಂಟಾಯಿತು. ಶ್ರೀ ಕೃಷ್ಣನು ಅತ್ಯಂತ ಕುಶಲಮತಿ, ಒಳ್ಳೆಯ ವಾಗ್ಮಿ, ರಾಜಕೀಯ ಚತುರ, ಗುಣ ಪಕ್ಷಪಾತಿ, ಉತ್ತಮ ರಾಯಭಾರಿ ಹಾಗೂ ಅಸಹಾಯ ಶೂರನಾಗಿ ಕಂಗೊಳಿಸಿದ್ದಾನೆ. ಅಲ್ಲದೇ ಅವನು ಮಹಾ ದಾರ್ಶನಿಕ. ಯುಕ್ತಾಯುಕ್ತ ಸಲಹೆಯಲ್ಲಿ ನಿಷ್ಣಾತ. ಎಲ್ಲ ರೀತಿಯಲ್ಲೂ ಗೌರವಾನ್ವಿತ. ಅವನ ಉಪದೇಶಾಸಾರವಾದ ಭಗವದ್ಗೀತೆಯು ವಿಶ್ವ ವಿಖ್ಯಾತ ಹಾಗೂ ವಿಶ್ವಮಾನ್ಯವು ಅಗಿದೆ.

ಮಹಾಭಾರತದಲ್ಲಿನ 18 ಪರ್ವಗಳಲ್ಲಿ ಸರಿಸುಮಾರು ಒಂದುನೂರು ಉಪಪರ್ವಗಳಿವೆ. ವಿಷಯಗಳ ಪುಷ್ಟೀಕರಣಕ್ಕಾಗಿ ಅಖ್ಯಾನ, ಉಪಾಖ್ಯಾನಗಳನ್ನು ಹೊಂದಿದೆ.

18 ಪರ್ವಗಳು ಹಾಗೂ ಅವುಗಳಲ್ಲಿರುವ ವಿಷಯದ ಬಗ್ಗೆ ಸ್ಥೂಲವಾಗಿ ನೋಡೋಣ.

1. **ಆದಿಪರ್ವ** ಮಹಾಭಾರತದಲ್ಲಿ ಬರುವ ನಾಯಕರು ಅವರ ಜನ್ಮವೃತ್ತಾಂತ ಹಾಗೂ ಬಾಲ್ಯ ಜೀವನದ ವಿಚಾರಗಳು.

2. **ಸಭಾಪರ್ವ** ಭಾರತದ ಧೀಮಂತ ಧರ್ಮಭೀರು ಧರ್ಮಜನ ರಾಜಸೂಯಯಾಗದ ಆಚರಣೆ, ಕೌರವನೊಂದಿಗೆ ಜೂಜಾಟದಲ್ಲಿ ಸೋಲು ಇತ್ಯಾದಿ.

3. **ವನಪರ್ವ** ಪಗಡೆಯಾಟದ ಜೂಜಿನಲ್ಲಿ ಸೋತ ಧರ್ಮರಾಯನು ತನ್ನ ತಮ್ಮಂದಿರೊಂದಿಗೆ ವನವಾಸಕ್ಕೆ ಹೊರಡುವುದು, 12 ವರ್ಷಗಳ ಕಾಲ ವನವಾಸದ ಅನುಭವ ಹಾಗೂ ದಾರುಣಪ್ರಸಂಗಗಳ ವಿವರ.

4. **ವಿರಾಟಪರ್ವ** 12 ವರ್ಷ ವನವಾಸದ ನಂತರ ಷರತ್ತಿನಂತೆ ಒಂದು ವರ್ಷ ಅಜ್ಞಾತವಾಸಕ್ಕೆ ವಿರಾಟ ನಗರಕ್ಕೆ ಪ್ರವೇಶ ಇತ್ಯಾದಿ.

5. **ಉದ್ಯೋಗಪರ್ವ** ವನವಾಸ ಹಾಗೂ ಅಜ್ಞಾತವಾಸ ಪೂರೈಸಿದನಂತರ ತಮ್ಮ ರಾಜ್ಯವನ್ನು ಮರಳಿಕೊಡಬೇಕೆಂದು ಪಾಂಡವರು ಕೌರವರನ್ನು ಕೇಳುತ್ತಾರೆ. ಅದರೆ ದುರ್ಬುದ್ಧಿಯ ಕೌರವನು ಅವರ

ಕೋರಿಕೆಯನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾನೆ. ಆಗ ಪಾಂಡವರು ಯುದ್ಧ ಸನ್ನದ್ಧರಾಗುತ್ತಾರೆ.

6. **ಭೀಷ್ಮಪರ್ವ** ಕೌರವನ ಬಗೆ ಬಗೆಯ ಕೋರಿಕೆಯಂತೆ ಒಲ್ಲದ ಮನಸ್ಸಿದ್ದರೂ ಸಕಲ ಸೇನಾನಿಗಳು ಬೆಚ್ಚುವಂತೆ, ಭೀಷ್ಮಾಚಾರ್ಯರ ಸೇನಾ ನಾಯಕತ್ವದಲ್ಲಿ 10 ದಿನ ಯುದ್ಧ ನಡೆದು ಶ್ರೀಕೃಷ್ಣನು ಚಕ್ರಹಿಡಿದುದು ಭೀಷ್ಮರಿಗೆ ತೃಪ್ತಿಯೊದಗಿಸಿ ಉಪಾಯದಿಂದ ಭೀಷ್ಮರು ಶರಶಯ್ಯೆಯನ್ನು ಆಶ್ರಯಿಸುವಂತೆ ಮಾಡಿದ ಭಾಗ ಚಿತ್ರಿತವಾಗಿದೆ. ಅರ್ಜುನನಿಗೆ ಸಾರ್ವಕಾಲಿಕ ಶ್ರೇಷ್ಠವಾದ ಕೃಷ್ಣನಿಂದ ಶ್ರೀಭಗವದ್ಗೀತಾ ಉಪದೇಶ, ವಿಶ್ವರೂಪ ದರ್ಶನ ಇತ್ಯಾದಿ ಚಿತ್ರಿತವಾಗಿದೆ.

7. **ದ್ರೋಣ ಪರ್ವ** ಮುಂದಿನ ಐದು ದಿನಗಳ ಕಾಲ ಆಚಾರ್ಯ ದ್ರೋಣರ ನೇತೃತ್ವದಲ್ಲಿ ಮುಂದುವರೆದ ಯುದ್ಧದ ವಿಚಾರ.

8. **ಕರ್ಣ ಪರ್ವ** ದ್ರೋಣರ ತರುವಾಯ ಕೌರವ ಸೇನೆಯ ಆಧಿಪತ್ಯವನ್ನು ಕರ್ಣನು ವಹಿಸಿಕೊಂಡು ಯುದ್ಧ ಮುಂದುವರೆಸಿದುದು, ತ್ಯಾಗ ದಾನದ ಹಿರಿಮೆ ಸಾಹಸಗಳಿಗೆ ಪ್ರಖ್ಯಾತನಾದ ಕರ್ಣನ ವಿಚಾರ.

9. **ಶಲ್ಯಪರ್ವ** ಮುಂದಿನ ಆಧಿಪತ್ಯವನ್ನು ಶಲ್ಯರಾಜನು ವಹಿಸಿಕೊಂಡಿದ್ದು 18 ದಿನಗಳ ಮಹಾಭಾರತ ಯುದ್ಧ ಮುಕ್ತಾಯ ಹಂತ ಇತ್ಯಾದಿ.

10. **ಸೌಪ್ತಿಕ ಪರ್ವ** ಯುದ್ಧಾನಂತರ ಪಾಂಡವರು ನಿದ್ರಿಸುತ್ತಿದ್ದಾಗ ಅವರ ಮಕ್ಕಳನ್ನು ಅಶ್ವತ್ಥಾಮನು ಕೊಲ್ಲುವುದು ಇತ್ಯಾದಿ.

11. **ಸ್ತ್ರೀ ಪರ್ವ** ಯುದ್ಧದಲ್ಲಿ ಮೃತರಾದವರನ್ನು ಕುರಿತು ಅವರ ಸ್ತ್ರೀಯರ ಆರ್ತನಾದ ದುಃಖಾದಿ ವಿಷಯ ಇತ್ಯಾದಿಗಳು.

12. **ಶಾಂತಿ ಪರ್ವ** ಎಲ್ಲ 18 ಪರ್ವಗಳಲ್ಲಿ ಇದೇ ಬಹಳ ದೊಡ್ಡದಾದ ಪರ್ವ. ಸುಮಾರು 15000 ಶ್ಲೋಕಗಳು ಇದರಲ್ಲಿವೆ.

ಸಕಾರಣವಾಗಿಯೋ ಅಕಾರಣವಾಗಿಯೋ ಯುದ್ಧದಲ್ಲಿ ಸತ್ತುಹೋದ ಹಾಗೂ ಗಾಯಾಳುಗಳಾದ ನೊಂದ ಅನೇಕ ರಾಜ ಮಹಾರಾಜರು, ಸೈನಿಕರು ಹಾಗೂ ನಿರಪರಾಧಿಗಳ ಬಗ್ಗೆ ಅತ್ಯಂತ ದುಃಖ ಭರಿತನಾದ ಧರ್ಮರಾಯನನ್ನು ಕುರಿತು ಭೀಷ್ಮಾಚಾರ್ಯರು ಮರಣ ಶಯ್ಯೆಯಿಂದ ನೀಡಿದ ಉಪದೇಶವೂ ಈ ಪರ್ವದಲ್ಲಿ ಪ್ರಧಾನವಾಗಿದೆ. ಜೀವನ ತತ್ತ್ವ, ರಾಜಧರ್ಮ, ಆಪದ್ಧರ್ಮ ಹಾಗೂ ಮೋಕ್ಷಧರ್ಮ ಇತ್ಯಾದಿ ವೇದ ವೇದಾಂತದ ಗಹನವಾದ ತತ್ತ್ವಗಳು ಸರಳವಾಗಿ ವಿವರಿತವಾಗಿದೆ.

13. **ಅನುಶಾಸನ ಪರ್ವ** ಕರ್ಮಯೋಗ, ಭಕ್ತಿಯ ಮಜಲು, ಜ್ಞಾನದ ಮೆಟ್ಟಿಲು ಹಾಗೂ ಭಗವತ್ ಪ್ರಾಪ್ತಿಯ ಸಾಧನಾ ವಿಚಾರವನ್ನು ಸವಿಸ್ತಾರವಾಗಿ ಹೇಳಿದೆ.

14. **ಅಶ್ವಮೇಧ ಪರ್ವ** ಯುದ್ಧದಿಂದ ಬಂದೊದಗಿರಬಹುದಾದ ಬ್ರಹ್ಮಹತ್ಯಾದಿ ಪಾಪದ ವಿಮೋಚನೆಗಾಗಿ ಅಶ್ವಮೇಧ ಯಾಗವನ್ನು ಯುಧಿಷ್ಠಿರನು ನಡೆಸಿದುದು ಹಾಗೂ ತತ್ಸಂಬಂಧ ವಿಚಾರಗಳು.

15. **ಆಶ್ರಮವಾಸ ಪರ್ವ** ಜೀವನದ ಆಶ್ರಮ ಧರ್ಮದಂತೆ ಧೃತರಾಷ್ಟ್ರ ಗಾಂಧಾರಿ, ಕುಂತಿ ಮೊದಲಾದವರ ವಾನಪ್ರಸ್ಥಾಶ್ರಮ ಸ್ವೀಕಾರ ಇತ್ಯಾದಿ.

16. **ಮೌಸಲ ಪರ್ವ** ಯಾದವರ ಅಂತಃಕಲಹ ಮುಸಲದಿಂದ ಅವರೆಲ್ಲ ನಾಶವಾದ ವಿಚಾರ.

17. **ಮಹಾಪ್ರಸ್ಥಾನ ಪರ್ವ** ಶ್ರೀಕೃಷ್ಣನ ದೇಹತ್ಯಾಗ, ಈ ವಿಷಯ ತಿಳಿದ ಧರ್ಮಜರಾದಿಯಾಗಿ ಎಲ್ಲರಿಗೂ ದುಃಖ, ಜೀವನ ಜುಗುಪ್ಸೆ. ಆನಂತರ ಯುಧಿಷ್ಠಿರನು ದ್ರೌಪದಿ ಹಾಗೂ ಸಹೋದರರೊಂದಿಗೆ ಸ್ವರ್ಗಲೋಕ ಕುರಿತು ಪ್ರಯಾಣ.

18. **ಸ್ವರ್ಗಾರೋಹಣಪರ್ವ** ಸ್ವರ್ಗವನ್ನು ಕುರಿತು ಹೊರಟ ಪಾಂಡವರಲ್ಲಿ ಯುಧಿಷ್ಠಿರನನ್ನು ಉಳಿದು ಇತರರೆಲ್ಲರೂ ಮೃತರಾಗುವಿಕೆ. ಯುಧಿಷ್ಠಿರನು ಇಂದ್ರರಥದಲ್ಲಿ ಕುಳಿತು ಸಶರೀರಿಯಾಗಿ ಸ್ವರ್ಗಲೋಕಕ್ಕೆ ತೆರಳುವುದು. ಅಲ್ಲಿ ತನ್ನಬಂಧುಜನರ ದರ್ಶನ ಇತ್ಯಾದಿಯೊಂದಿಗೆ ಮಹಾಭಾರತ ಕಥೆ ಮುಕ್ತಾಯ ಅಗುತ್ತದೆ.

ಮಹಾಭಾರತ ಕೇವಲ ಪುರಾಣವಷ್ಟೇ ಅಲ್ಲ, ಅಥವಾ ಕಾಲ ಕಳೆಯಲು ಕೇಳುವಂತಹ ಪುಣ್ಯಕಥೆಯೂ ಅಲ್ಲ. ಅದೊಂದು ನೀತಿ ನಿಯಮಗಳನ್ನು ಒಳಗೊಂಡ ಭಾಂಡಾಗಾರ. ನಿತ್ಯ ಸತ್ಯವಾದ ವೇದದ ಜ್ಞಾನರಾಶಿಯನ್ನು ಸುಲಭಸಾಧ್ಯಕ್ರಮದಲ್ಲಿ ಜನ ಸಾಮಾನ್ಯರಿಗೂ ಅರ್ಥವಾಗಿಸಿ ಧರ್ಮಾಧರ್ಮ ವಿವೇಚನೆಯಲ್ಲಿ ಜೀವನವನ್ನು ಸಾರ್ಥಕ್ಯಪಡಿಸಿಕೊಳ್ಳುವಂತಹ ಉಪಾಯಗಳನ್ನು ಮಹಾಭಾರತ

ಪ್ರತಿಪಾದಿಸಿದೆ. ಜೀವನವು ನೀತಿಯುತವಾದಾಗ ಜನ್ಮ ಸಾರ್ಥಕ್ಯವನ್ನು ಪಡೆಯುವುದು. ನಮ್ಮ ಸ್ವ ಅಭಿವೃದ್ಧಿಯೊಂದಿಗೆ ಪರಚಿಂತನೆ, ಪರಹಿತವನ್ನು ಬಯಸುವಂತಹ ಜೀವನ ನಮ್ಮದಾಗಬೇಕು. ನಮ್ಮ ಬದುಕು ಸಾಗುವುದು ಸಾಮಾಜಿಕ ಕುಟುಂಬದಲ್ಲಿ. ಸ್ವಹಿತ, ಸಮಾಜದ ಹಿತ ಎರಡನ್ನು ಬಯಸುವುದೇ ಸರಿಯಾದ ಜೀವನಕ್ರಮ.

ಅತ್ಯಂತ ಸ್ವಾರ್ಥ ಲೋಭಿತನದಿಂದ ಜೀವನ ಸಾಗಿಸಿದ ಸುಯೋಧನನ ಮಾರ್ಗ ಅದರಿಂದ ಉಂಟಾದ ನಾನಾ ವಿಧ ಕಷ್ಟ ಕಾರ್ಪಣ್ಯ ಅರಿಯದವರಾರು? ಧರ್ಮ, ಅರ್ಥ, ಕಾಮ ಈ ಮೂರರಲ್ಲಿ ಸರಿಯಾದ ವಿವೇಚನೆಯಿಂದ ಸಾಗಿ ಮೋಕ್ಷಸಾಧನೆ ಕೊಡುವ ಸುಪಥವನ್ನು ಸಿದ್ಧಿಸಿ ಕೊಳ್ಳುವುದೇ ಜೀವನದ ಸಾರ್ಥಕತೆಯೆಂಬುದನ್ನು ಋಷಿ ಮುನಿಗಳಾದಿಯಾಗಿ ಎಲ್ಲಾ ಸಿದ್ಧಪುರುಷರು ಮನಗಂಡಿದ್ದಾರೆ. ಕೇವಲ ದಾಯಾದಿಮತ್ಸರ, ಅತ್ಯಂತ ಲೋಭಿತನದಿಂದ ಅರ್ಥ ಹಾಗೂ ಕಾಮವೆರಡನ್ನೇ ಬಯಸಿ ತಂತ್ರಗಳನ್ನು ರೂಪಿಸುತ್ತಿದ್ದ ಸುಯೋಧನ. ಆಗ ಉತ್ತಮತೆಗಾಗಿ ಧರ್ಮದ ಹಾದಿಯಲ್ಲಿ ಪ್ರತಿತಂತ್ರ ರೂಪಿಸಿ ಲೋಕ ಕಲ್ಯಾಣವನ್ನು ಕರುಣಿಸಿದ ಕೃಷ್ಣ.

ನೀತಿ ಪ್ರಧಾನವಾದ ಜೀವನವು ಎಂದಿಗೂ ಅಮರತೆಯನ್ನು ಪಡೆಯುವುದು. ಜ್ಞಾನದ ಜೊತೆಗೆ ಮಹಾಭಾರತವು ಆಸ್ತಿಕ ಬುದ್ಧಿಯನ್ನು ಬೆಳೆಸಲು ದ್ಯೋತಕವು, ಬುದ್ಧಿಮತ್ತೆಯು ಚೆನ್ನಾಗಿದ್ದರೆ ತಾನೇ ಸ್ವಹಿತ ಪರಹಿತದ ವಿವೇಚನೆ ಬರುವುದು. ಬುದ್ಧಿಯ ಸನ್ಮಾರ್ಗದ ನಡೆ

ಆಸ್ತಿಕತೆಯನ್ನು ಬೆಳೆಸುವುದು. ಅರಿಷಡ್ವರ್ಗಗಳೆಂಬ ಅಂಧಕಾರವನ್ನು ದೂರೀಕರಿಸಲು ಜ್ಞಾನ ಜ್ಯೋತಿಯೊಂದಲ್ಲದೇ ಮತ್ತೊಂದಿಲ್ಲ. ಸತ್ವ ರಜಸ್ ತಮೋಗುಣಗಳಿದ್ದಾಗ್ಯೂ ಸತ್ವಭರಿತವಾಗಿ ನಡೆದಾಗ ಮಾತ್ರ ಸರ್ವಹಿತ, ರಜಸ್ತಮೋಪ್ರಧಾನವಾಗಿ ನಡೆದಾಗ ಕಾಮ, ಕ್ರೋಧ, ಮದ, ಮಾತ್ಸರ್ಯ,ಲೋಭ ಮೋಹಾದಿ ದ್ವೇಷಗುಣಗಳು ಬೆಳೆಯುತ್ತವೆ.

ಅದರಿಂದ ಅನಿಷ್ಟ ಪರಂಪರೆಗಳು ಪ್ರಾಪ್ತವಾಗುತ್ತವೆ. ಮನಸ್ಸು ಒಪ್ಪುವ ಹಾಗೆ ಬೇರೆಯವರಿಗೆ ತೊಂದರೆಯಾಗದಂತೆ ಯುಕ್ತಾಯುಕ್ತ ವಿಮೋಚನೆಯಿಂದ ನಡೆಯುವುದೇ ಧರ್ಮಾದಿ ಸನ್ಮಾರ್ಗ. ಪರನಿಂದೆ, ಪರಧರ್ಮ ಅಸಹಿಷ್ಣುತೆ, ಯುಕ್ತಿಗೆ ಕುಯುಕ್ತಿ, ಧರ್ಮಾಂಧತೆ. ರಾಜಕೀಯ ಈರ್ಷ್ಯೆ ಅತಿಲೋಭತನ, ಅತಿಸ್ವಾರ್ಥ, ಪರಮಾಧಿಕಾರ ಇತ್ಯಾದಿಗಳು ಎಂದೆಂದಿಗೂ ಅಸ್ಥಿರತೆಯ ಮೂಲಕ ನಾಶವನ್ನೇ ಸೂಚಿಸುತ್ತವೆ. ಆದರೂ ಈ ಮಾರ್ಗವೇ ಬಹಳ ರುಚಿಕರವು ಕೆಲವರಿಗೆ.

ಭಾರತೀಯರು ಭಾ - ರತರು ಅಂದರೆ ಜ್ಞಾನ ಪ್ರಿಯರು, ಯುಕ್ತಾಯುಕ್ತ ವಿಚಾರಗಳಿಂದ ಪ್ರಪಂಚವನ್ನು ಅರ್ಥೈಸಿ ಜೀವನ ಸಾಗಿಸಿದವರು. ಸಕಲರನ್ನೂ ಭಾರತರನ್ನಾಗಿಸಲು ಉಚಿತವಾದುದು ಭಾರತ. ಇಂತಹ ಭಾರತತ್ತ್ವ ಯಾರಿಗೆ ತಾನೇ ಬೇಡ? ಆದುದರಿಂದ ವೇದಾರ್ಥದ ವಿಸ್ತಾರಕ್ಕಾಗಿ ಹೊರಟ ಭಾರತ ಅಂದು, ಇಂದು, ಮುಂದು ಎಂದೆಂದೂ

ನಿತ್ಯಸತ್ಯವನ್ನು ಸಾರುವ ಉದ್ಗ್ರಂಥ, ಇತಿಹಾಸ. ಇದು ಸಾರ್ವಕಾಲಿಕ, ಸಾರ್ವದೇಶಿಕ ಹಾಗೂ ಸಾರ್ವತ್ರಿಕ.

ಹೃದಯಾನಂದವರ್ಧಕವಾದ ಕಾವ್ಯ ಸಕಲರ ಸರ್ವವಿಧ ಅಭ್ಯುದಯಕ್ಕೆ ಸಾಧನ. ಅಸಾಧಾರಣ ಪ್ರತಿಭಾಸಂಪನ್ನ ಕವಿಯ ಲೋಕೋತ್ತರ ವರ್ಣನಾತ್ಮಕ ಕರ್ಮವೇ ಕಾವ್ಯ. ಇಂತಹ ಕವಿ ಕಾರ್ಯ ಸಹೃದಯ ಲೋಕವನ್ನು ರಂಜಿಸುತ್ತಾ ಮೃದುಮಧುರಭಾಷಿಯಾದ ರಾಮನಂತೆ ಸಾತ್ವಿಕ ಕಾರ್ಯ ಕೋವಿದನಾಗಿ ಜನಪ್ರಿಯವಾಗಿ ಬಾಳಬೇಕೆಂಬ ಭಾವನೆಯನ್ನು ಬಡಿದೆಬ್ಬಿಸಿ, ರಾವಣನಂತೆ ಆಗಬಾರದೆಂಬ ಭಾವನೆಯನ್ನು ಜಾಗೃತ ಗೊಳಿಸುತ್ತದೆ. ಕವಿಗತ ಪ್ರತಿಭಾಪ್ರಭಾವದ ವಾಗ್ವಿನ್ಯಾಸ ಚಮತ್ಕಾರದಿಂದ ಸಹೃದಯಲೋಕಕ್ಕೆ ರಸದೌತಣ, ಆನಂದವ ನ್ನೀಯುವುದು ಹಾಗಾಗಿ ಕಾವ್ಯ ಸರ್ವೋಪಾದೇಯ.

**ಕಾವ್ಯ;** ದೃಶ್ಯ - ಶ್ರವ್ಯವೆಂದು ಎರಡು ಬಗೆ. ನೋಡಲು ಯೋಗ್ಯವಾದುದು ದೃಶ್ಯ ಕಾವ್ಯವಾದರೆ ಅದರೊಂದಿಗೆ ಶ್ರವಣ ಕಾರ್ಯ ಆಂಗಿಕ ಅಭಿನಯಗಳು ಸೇರಿವೆ. ವಾಚಿಕಾಭಿನಯ ಮಾತ್ರ ಶ್ರವ್ಯವಾಗಿದೆ. ನಟ ಕರ್ಮ ಪ್ರಧಾನವಾದ ದೃಶ್ಯ ಪ್ರಕಾರ ನಾಟಕ, ಪ್ರಕರಣ, ಬಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಾಕಾರ, ವೀಥಿ, ಅಂಕ, ಈಹಾ, ಮೃಗಗಳೆಂದು ಹತ್ತು ವಿಧ. ಇವೆಲ್ಲವು ದೃಶ್ಯ ಪ್ರಧಾನವಾಗಿರುವುದು.

ರಮಣೀಯಾರ್ಥಪ್ರತಿಪಾದನೆಯ ಕಾವ್ಯವು ಶ್ರವಣಯೋಗ್ಯವಾದುದು ಶ್ರವ್ಯವೆನಿಸಿದೆ. ಕಾವ್ಯ ಪ್ರತಿಪಾದಕ ಶಬ್ದ ತದರ್ಥ

ಗ್ರಹಣ ಪೂರ್ವಕವಾಗಿ ಶ್ರವಣವೆನಿಸಿದೆ. ಶ್ರವ್ಯ ಕಾವ್ಯ ಪ್ರಕಾರ ಪದ್ಯ, ಗದ್ಯ, ಪದ್ಯ ಗದ್ಯವೆಂದು ಮೂರುವಿಧ. ಮಾತ್ರಾ ಅಕ್ಷರ ಪರಿಮಾಣದಿಂದ ಛಂದೋಯುಕ್ತವಾಗಿದ್ದು ಮಹಾಕಾವ್ಯ.

ಖಂಡಕಾವ್ಯಗಳೆಂಬ ಅವಾಂತರ ಭೇದವನ್ನು ಪಡೆದಿದೆ. ಆದಿ ಕಾವ್ಯವಾದ ರಾಮಾಯಣ, ಇತಿಹಾಸವೂ ಆದ ಮಹಾಭಾರತದ ಪರಿಚಯದ ನಂತರ ಸಂಸ್ಕೃತ ಸಾಹಿತ್ಯ ಪ್ರಪಂಚದಲ್ಲಿ ಪಂಚಮಹಾಕಾವ್ಯಗಳೆಂದು ಪ್ರಸಿದ್ಧಿ ಪಡೆದಿರುವ ರಘುವಂಶ, ಕುಮಾರಸಂಭವ, ಶಿಶುಪಾಲವಧ, ಕಿರಾತಾರ್ಜುನೀಯ ಹಾಗು ನೈಷಧಚರಿತದ ಪರಿಚಯ ಪಡೆಯೋಣ.

## ರಘುವಂಶ

ಕವಿಕುಲಗುರುವೆಂಬ ಖ್ಯಾತಿ ಪಡೆದ ಮಹಾಕವಿ ಕಾಳಿದಾಸನಿಂದ ವಿರಚಿತವಾದ ಶ್ರೇಷ್ಠ ಕಾವ್ಯ ರಘುವಂಶ. ಕಲಾಪ್ರಜ್ಞತೆ, ಲೋಕಾನುಭವ, ಶಾಸ್ತ್ರಜ್ಞಾನ ಹೀಗೆ ಕವಿಯ ಬಹುಮುಖ್ಯ ಪ್ರತಿಭೆಯು ಭಾಷಾ ಲಾಲಿತ್ಯದಿಂದ ಪ್ರಕಾಶಿತವಾಗಿದೆ.

ರಘುವಂಶದಲ್ಲಿ 19 ಸರ್ಗಗಳಿವೆ. 1509 ಶ್ಲೋಕಗಳಿವೆ. ರಘುವಂಶದ ರಾಜರನ್ನು ಕವಿಯು ತನ್ನ ಕಥಾನಾಯಕರನ್ನಾಗಿ ಆರಿಸಿಕೊಂಡಿದ್ದಾನೆ. ದಿಲೀಪ, ರಘು, ಅಜ, ದಶರಥ, ಶ್ರೀರಾಮ, ಕುಶ ಮೊದಲಾಗಿ 29 ರಾಜರ ವಿಚಾರವು ಪ್ರಸ್ತುತವಾಗಿದೆ. ಸೂರ್ಯಪುತ್ರನಾದ ಮನುವಿನ ವಂಶದಲ್ಲಿ ದಿಲೀಪನೆಂಬ ರಾಜನು ಉದಯಿಸಿದನು. ಕುಲಗುರು ವಸಿಷ್ಠರ ಆಜ್ಞೆಯಂತೆ ನಂದಿನೀ ಧೇನುವನ್ನು ಸೇವಿಸಿ ರಘು ಎಂಬ ಪುತ್ರರತ್ನವನ್ನು ಪಡೆದನು.

ದಿಲೀಪನು 99 ಅಶ್ವಮೇಧ ಯಾಗಗಳನ್ನು ಆಚರಿಸಿ, ರಘುವಿಗೆ ರಾಜ್ಯಭಾರ ವಹಿಸಿ ವಾನಪ್ರಸ್ಥಕ್ಕೆ ತೆರಳಿದನು. ಹೀಗೆ ಒಬ್ಬೊಬ್ಬ ರಾಜರ ಚರಿತ್ರೆಯು ಯಥಾವತ್ತಾಗಿ ವರ್ಣಿತವಾಗಿದೆ. ಶ್ರೀರಾಮನ ವೃತ್ತಾಂತ ಬಹಳ ವಿಶದವಾಗಿ ಅಂದರೆ 6 ಸರ್ಗಗಳಲ್ಲಿ ಬಂದಿದೆ. ಶ್ರೀರಾಮನ ನಂತರ ಕುಶ, ಅವನ ಮಗ ಅತಿಥಿ, ಅವನ ಮಗ ನಿಷಧ ಹೀಗೆ ರಾಜರ ವಂಶಚರಿತವು ಬಹಳ ಮನೋಹರವಾಗಿ ನಿರೂಪಿತವಾಗಿದೆ.

ಭಾರತೀಯ ಆದರ್ಶಗಳ ಭವ್ಯಪರಂಪರೆಯನ್ನು ತನ್ನ ಮಹಾಕಾವ್ಯದಲ್ಲಿ ಸುಂದರವಾಗಿ ಕವಿಯು ಚಿತ್ರಿಸಿದ್ದಾನೆ. ರಾಜರುಗಳು ಶುದ್ಧ ಚರಿತ್ರರು. ಫಲಾಪೇಕ್ಷೆಯಿಲ್ಲದೆ ಕಾರ್ಯವನ್ನು ಮಾಡುವವರು.

ಯಥಾವಿಧಿಯ ಯಜ್ಞಯಾಗ ಜಪ ಪೂಜೆಯಲ್ಲಿ ನಿರತರು. ಅಪೇಕ್ಷೆಗಳಿಗೆ ಅನುಕೂಲತೆಯನ್ನು ಕಲ್ಪಿಸಿ ಅಪರಾಧಕ್ಕೆ ತಕ್ಕಂತೆ ದಂಡಿಸುವವರು. ಸತ್ಯದ ರಕ್ಷಣೆಗಾಗಿ ಮಿತ ಭಾಷಿಗಳು, ಯಶಸ್ಸಿಗಾಗಿ ಗೆಲ್ಲ ಬಯಸುವವರು. ಸಂತತಿಗಾಗಿ ಗೃಹಸ್ಥರು. ಬಾಲ್ಯದಲ್ಲಿ ವಿದ್ಯಾಭ್ಯಾಸ, ಯೌವನದಲ್ಲಿ ಭೋಗಪ್ರವೃತ್ತಿ, ವಾರ್ಧಕ್ಯದಲ್ಲಿ ವಾನಪ್ರಸ್ಥಾಶ್ರಮ ಮುನಿವೃತಿ. ಹೀಗೆ ಆದರ್ಶಪೂರ್ಣವಾದ ಯಥಾಯೋಗ್ಯವಾದ ಜೀವನವನ್ನು ನಿರ್ವಹಿಸಿದವರು.

ಪ್ರಜೆಗಳ ಯೋಗಕ್ಷೇಮ, ವಿದ್ಯಾಭ್ಯಾಸ, ಪಾಲನೆ, ಪೋಷಣೆ ಮೊದಲಾಗಿ ಸಂಪೂರ್ಣ ರಕ್ಷಣೆಯಿತ್ತು ರಾಜ್ಯ ಪರಿಪಾಲನೆ ಮಾಡುತ್ತಿದ್ದರು. ಹಾಗಾಗಿ ಪ್ರಜೆಗಳು ರಾಜರನ್ನು ಪಿತೃ ಸಮಾನರೆಂದು, ದೇವ ಸ್ವರೂಪರೆಂದು

ಪೂಜನೀಯ ಭಾವನೆಯಲ್ಲಿ ನೋಡುತ್ತಿದ್ದರು. ಹೀಗೆ ಕವಿಯು ರಾಜರ ಜೀವನಕ್ರಮ ಪ್ರಜೆಗಳೊಂದಿಗೆ ಅವರ ಮಧುರ ಬಾಂಧವ್ಯವನ್ನು ಮನೋಜ್ಞವಾಗಿ ವರ್ಣಿಸಿದ್ದಾನೆ. ಕಥಾವಸ್ತುವನ್ನು ಸಂಕ್ಷೇಪವಾಗಿ ಮೂಲ ವಿಷಯಕ್ಕೆ ಚ್ಯುತಿಬಾರದ ಹಾಗೆ ಬಹಳ ಚೇತೋಹಾರಿಯಾಗಿ, ಮನೋಹರವಾಗಿ ಕವಿಯು ವರ್ಣಿಸಿದ್ದಾನೆ.

ಅನೇಕ ರಾಜರು, ನಗರಗಳು, ನದಿಗಳು, ಗಿರಿ ಶಿಖರಗಳು, ಅಲ್ಲಿನ ಜನರು, ಅವರ ಉಡುಗೆ ತೊಡುಗೆಗಳು, ಅಲ್ಲಿಯ ಪ್ರಸಿದ್ಧವಾದ ವಸ್ತುಗಳು, ಪ್ರಾಣಿಗಳು ಮುಂತಾಗಿ ಜೀವನ ವೈವಿಧ್ಯವನ್ನು ಬಹಳವಾಗಿ ವರ್ಣಿಸಿದ್ದಾನೆ. ಪ್ರಖ್ಯಾತವಾದ ಈ ರಘುವಂಶ ಕಾವ್ಯಕ್ಕೆ 33 ವ್ಯಾಖ್ಯಾನಗಳಿರುವುದು, ಸಾಹಿತ್ಯ ಪ್ರಪಂಚದಲ್ಲಿ ಅದರ ಪ್ರಾಮುಖ್ಯವನ್ನು ಎತ್ತಿ ಹಿಡಿದಿದೆ.

## ಕುಮಾರ ಸಂಭವ

17 ಸರ್ಗಗಳು ಹಾಗೂ 1096 ಶ್ಲೋಕಗಳಿಂದ ಕೂಡಿದ ಕುಮಾರ ಸಂಭವವು ಕಾಳಿದಾಸನ ಇನ್ನೊಂದು ಮಹಾಕಾವ್ಯ. ಇದಕ್ಕೆ 37 ವ್ಯಾಖ್ಯಾನಗಳಿವೆ. ಅದರಲ್ಲಿ ಮಲ್ಲಿನಾಥನ ಸಂಜೀವಿನೀ ವ್ಯಾಖ್ಯಾನವು ಪ್ರಸಿದ್ಧವಾದುದು. ಇದು ಪೌರಾಣಿಕ ಕಥಾವಸ್ತುವನ್ನೊಳಗೊಂಡಿದೆ. ಪಾರ್ವತೀಪರಮೇಶ್ವರರ ವಿವಾಹ, ಕುಮಾರಸ್ವಾಮಿಯ ಜನನ, ಹಾಗೂ ತಾರಕಾಸುರನ ವಧೆಯು ಇಲ್ಲಿ ವರ್ಣಿತವಾಗಿದೆ. ಈ ವೃತ್ತಾಂತವು ಅನೇಕ ಪುರಾಣಗಳಲ್ಲಿ, ರಾಮಾಯಣ, ಮಹಾಭಾರತದಲ್ಲೂ ಪ್ರಸ್ತುತವಾಗಿದೆ.

ದೇವತೆಗಳ ವಿಹಾರ ಭೂಮಿಯಾದ ಹಿಮಾಲಯಪರ್ವತ ಅನೇಕ ವೈಶಿಷ್ಟ್ಯಗಳ ವಾಸಸ್ಥಾನ. ಹಿಮಾಲಯನು ಗೃಹಸ್ಥನಾಗಿ ಪತ್ನಿ ಮೇನಾ, ಮಗ ಮೈನಾಕ ಹಾಗು ಮಗಳು ಉಮೆಯಿಂದ ಕೂಡಿದ ಕುಟುಂಬಿಯು ದಕ್ಷಯಜ್ಞದಲ್ಲಿ ದೇಹತ್ಯಾಗ ಮಾಡಿ ಮೇನೆಯ ಗರ್ಭದಲ್ಲಿ ಪಾರ್ವತಿಯು ಉಮೆಯಾಗಿ ಅವತರಿಸಿದ್ದಾಳೆ.

ತಾರಕಾಸುರನಿಂದ ದೇವತೆಗಳು ಬಹಳಪೀಡಿತರಾಗಿ ಬ್ರಹ್ಮನನ್ನು ಪ್ರಾರ್ಥಿಸುತ್ತಾರೆ. ಆಗ ಬ್ರಹ್ಮನು ಶಿವನ ಅಂಶದಿಂದ ಜನಿಸುವ ಸೇನಾನಿಯು ತಾರಕನನ್ನು ಸಂಹರಿಸುವನೆಂದು ಅರುಹುತ್ತಾನೆ. ಇಂದ್ರನ ಪ್ರಾರ್ಥನೆಯ ಮೇರೆಗೆ ಮನ್ಮಥನು ರತಿಯೊಡಗೂಡಿ ಈಶ್ವರನು ತಪಸ್ಸನ್ನಾಚರಿಸುವಲ್ಲಿ ವಸಂತ ಋತುವನ್ನು ವಿಜೃಂಭಿಸುತ್ತಾನೆ. ವಿಚಲಿತವಾದ ಹರನ ದೃಷ್ಟಿ ಕ್ರೋಧಾಗ್ನಿಯಾಗಿ ಮನ್ಮಥನನ್ನು ಸುಟ್ಟು ಬೂದಿ ಮಾಡುತ್ತದೆ. ಮುಂದೆ ಶಿವಪಾರ್ವತಿಯರ ವಿವಾಹ ಸಮಯದಲ್ಲಿ ಶಾಪವಿಮೋಚನೆಯಾಗಿ ಉಜ್ಜೀವಿತನಾಗುತ್ತಾನೆ. ಇತ್ತ ಪಾರ್ವತಿಯು ಕಠೋರ ತಪಸ್ಸಿನಲ್ಲಿ ಮಗ್ನಳಾಗುತ್ತಾಳೆ. ಈಶ್ವರನು ಬಾಲಕನ ರೂಪದಲ್ಲಿ ಬಂದು ಅವಳ ಆಂತರ್ಯವನ್ನು ತಿಳಿಯಲು ಪ್ರಯತ್ನಿಸುತ್ತಾನೆ. ಅದಕ್ಕೆ ಪಾರ್ವತಿಯು ಶಿವನಲ್ಲಿ ಸದೃಢ ಅನುರಕ್ತತೆಯನ್ನು ವ್ಯಕ್ತಪಡಿಸುತ್ತಾಳೆ.

ಸಪ್ತರ್ಷಿಗಳು ಹಿಮಾಲಯವನ್ನು ಕಂಡು ಶಿವನ ಬಯಕೆಯನ್ನು ತಿಳಿಸಿದಾಗ ಸಂತೋಷದಿಂದ ಅವನು ಒಪ್ಪುತ್ತಾನೆ. ನಂತರ ಶಿವನು ದಿಬ್ಬಣ ಸಮೇತ ಆಗಮಿಸಿ ಬ್ರಹ್ಮನ ಪೌರೋಹಿತ್ಯದಲ್ಲಿ ಬಹಳ ಸಂಭ್ರಮದಿಂದ

ಶಿವಪಾರ್ವತಿಯ ವಿವಾಹವು ನೆರವೇರುತ್ತದೆ. ಆಗ ಬ್ರಹ್ಮನು ವೀರ ಪುತ್ರವತಿಯಾಗು ಎಂದು ಪಾರ್ವತಿಯನ್ನು ಹರಸುತ್ತಾನೆ. ಹೀಗೆ ವಿವಾಹಾದಿ ಪ್ರಸಂಗಗಳನ್ನು ಕವಿಯು ಬಹಳ ಮನೋಜ್ಞವಾಗಿ ವರ್ಣಿಸಿದ್ದಾನೆ.

ನಂತರದ ಸರ್ಗಗಳಲ್ಲಿ ಕುಮಾರ ಸ್ವಾಮಿಯ ಜನನ, ಬಾಲಲೀಲೆ, ಜ್ಞಾನಾರ್ಜನೆ, ಶೌರ್ಯ ಮೊದಲಾದ ವಿವರಣೆಯಿದೆ.

ಇಂದ್ರನ ಕೋರಿಕೆ ಮೇರೆಗೆ ಶಿವನು ಕುಮಾರನನ್ನು ತಾರಕಾಸುರನ ವಧೆಗೆ ಯುದ್ಧಕ್ಕೆ ಕಳುಹಿಸುತ್ತಾನೆ. ತಾರಕಾಸುರನೊಡನೆ ನಡೆದ ಘೋರ ಯದ್ಧದಲ್ಲಿ ಅವನೊಡನೆ ಕಾದಾಡಿ ಕುಮಾರನು ಅವನನ್ನು ಸಂಹರಿಸುತ್ತಾನೆ. ಇಂದ್ರನು ಸ್ವರ್ಗರಾಜ್ಯವನ್ನು ಮರಳಿ ಪಡೆಯುತ್ತಾನೆ. ಹಿಮಾಲಯದ ವಿಶಿಷ್ಟ್ಯತೆ, ಅಲ್ಲಿಯ ನಾನಾವಿಧ ವೃಕ್ಷಗಳು, ಔಷಧಿ ವನಸ್ಪತಿಗಳು,

ನಾನಾವಿಧ ಪುಷ್ಪಗಳು, ಆನೆ, ಸಿಂಹ, ನವಿಲು, ಚಮರೀಮೃಗ ಮೊದಲಾದ ಪ್ರಾಣಿ ವರ್ಗಗಳು - ಹೀಗೆ ಸರ್ವಶ್ರೇಷ್ಠ ವಸ್ತುಗಳಿಗೂ ಅದು ಆಧಾರ ಭೂತವಾಗಿದೆ. ವಿಸ್ತಾರವಾದ ಹಿಮದ ಆವರಿಕೆ, ಚಂದ್ರೋದಯದ ಮನೋಹರತೆ ಮೊದಲಾಗಿ ನಾನಾವಿಚಾರಗಳ ದಿವ್ಯತೆಯನ್ನು ಸೌಂದರ್ಯವನ್ನು, ಮನಮುಟ್ಟುವಂತೆ ಕವಿಯು ಚಿತ್ರಿಸಿದ್ದಾನೆ ಒಂದೊಂದು ವಿಷಯವನ್ನು ಬಹಳಸುಂದರವಾಗಿ ಹಾಗು  ಸರಳವಾಗಿ ನಿರೂಪಿಸಿರುವ ಕಾಳಿದಾಸನ ಅಪ್ರತಿಮ ಶೈಲಿ ಆತನ ಅಸಾಧಾರಣ ಪ್ರತಿಭೆಗೆ ಹಿಡಿದ ಕನ್ನಡಿಯಂತಿದೆ.

# ಶಿಶುಪಾಲವಧ

ಮಾಘ ಮಹಾಕವಿಯಿಂದ ರಚಿತವಾದ ಮಹಾಕಾವ್ಯವು ಶಿಶುಪಾಲವಧ. ಮಾಘಕಾವ್ಯವೆಂದೂ ಪ್ರಸಿದ್ಧಿ ಪಡೆದಿದೆ. 20 ಸರ್ಗಗಳಲ್ಲಿ 1633 ಶ್ಲೋಕಗಳಿಂದ ಕೂಡಿರುವ ಈ ಕಾವ್ಯಕ್ಕೆ ಎಂಟು ವ್ಯಾಖ್ಯಾನಗಳಿವೆ. ಇದರಲ್ಲಿ ವಲ್ಲಭ ದೇವನ ಹಾಗು ಮಲ್ಲಿನಾಥನ ಟೀಕೆಗಳು ಪ್ರಸಿದ್ಧವಾಗಿವೆ.

ಕಾಳಿದಾಸನ ಉಪಮೆ, ಭಾರವಿಯ ಅರ್ಥಗೌರವ, ದಂಡಿಯ ಪದಲಾಲಿತ್ಯ ಈ ಮೂರು ಗುಣಗಳು ಮಾಘನಲ್ಲಿವೆಯೆಂದು ಸಹೃದಯರು ಸಂಬೋಧಿಸಿದ್ದಾರೆ. ಅನೇಕವಿಧದ ಉತ್ಪ್ರೇಕ್ಷೆ, ಸ್ತ್ರೀಲಾವಣ್ಯ, ಸೂರ್ಯೋದಯದ ಬಗ್ಗೆ, ಸ್ವಭಾವೋಕ್ತಿ, ರಾಜನೀತಿ ವ್ಯಾಕರಣಾದಿ ಶಾಸ್ತ್ರ ವಿಷಯಗಳಲ್ಲಿ ಪಾಂಡಿತ್ಯ ತೋರಿಸಿದ್ದಾನೆ.

ಕಥಾಭಾಗವನ್ನು ಮಹಾಭಾರತದಿಂದ ತೆಗೆದುಕೊಳ್ಳಲಾಗಿದೆ. ಶ್ರೀ ಕೃಷ್ಣನಿಗೆ ನಾರದನು ಶಿಶುಪಾಲನ ದುಷ್ಟತನವನ್ನು ಹೇಳುವುದು, ಉದ್ಧವ, ಬಲರಾಮನೊಡನೆ ಮಂತ್ರಾಲೋಚನೆ ಮಾಡಿ ಶ್ರೀಕೃಷ್ಣನು ಯುಧಿಷ್ಠಿರನ ರಾಜಸೂಯಯಾಗಕ್ಕೆ ಬಂದಾಗ ಶಿಶುಪಾಲನು ಕೃಷ್ಣನನ್ನು ನಿಂದಿಸಿ ಯುದ್ಧಕ್ಕೆ ಸಜ್ಜಾಗುತ್ತಾನೆ. ನಂತರ ಶಿಶುಪಾಲನ ಸಂಹಾರವಾಗುತ್ತದೆ.

ಈ ಕಥಾವಸ್ತುವನ್ನಿಟ್ಟುಕೊಂಡು ಮೋಹಕವಾಗಿ ಮನೋಜ್ಞವಾಗಿ ಕಾವ್ಯರಚಿತವಾಗಿದೆ.

# ಕಿರಾತಾರ್ಜುನೀಯ

ಇದನ್ನು ರಚಿಸಿದವನು ಕವಿ ಭಾರವಿ. ವಿದ್ವಾಂಸರ ಪ್ರಂಶಸೆಗೆ ಪಾತ್ರವಾಗಿ ವ್ಯಾಕರಣಶಾಸ್ತ್ರದಲ್ಲಿ ಉದಾಹರಣೆಗೆ ಬಹುಯೋಗ್ಯ ವೆನಿಸಿರುವುದು. ಈ ಕಾವ್ಯವು ಕವಿಯ ಸಕಲ ಶಾಸ್ತ್ರ ಸಂಪನ್ನತೆ, ಕವಿತಾಶಕ್ತಿ, ಅಸಾಧಾರಣ ಪಾಂಡಿತ್ಯವನ್ನು ಪ್ರಕಾಶಿಸುತ್ತದೆ.

ಇದು 18 ಸರ್ಗವಿರುವ 1040 ಶ್ಲೋಕಗಳಿಂದ ಕೂಡಿದ ಮಹಾಕಾವ್ಯ. ಮಹಾಭಾರತ ಪ್ರಸಂಗವು ಇದಕ್ಕೆ ಆಧಾರ.

ಶಿವಾನುಗ್ರಹಕ್ಕಾಗಿ ಇಂದ್ರಕೀಲದಲ್ಲಿ ಅರ್ಜುನನು ತಪಸ್ಸನ್ನು ಆಚರಿಸುತ್ತಿರುವಾಗ ಶಿವನು ಕಿರಾತವೇಷದಲ್ಲಿ ಪರಿಕ್ಷಾರ್ಥವಾಗಿ ಅಲ್ಲಿಗೆ ಬರುತ್ತಾನೆ. ಅವರಿಬ್ಬರಿಗೂ ಯುದ್ಧ ನಡೆಯುತ್ತದೆ. ಅವನ ಸಾಹಸ, ಬುದ್ಧಿಮತ್ತೆಗೆ ಮೆಚ್ಚಿ ಶಿವನು ಪಾಶುಪತಾಸ್ತ್ರವನ್ನು ಅರ್ಜುನನಿಗೆ ಅನುಗ್ರಹಿಸುತ್ತಾನೆ. ಈ ಕಥಾ ವಸ್ತುವು ಉಚಿತವಾದ ಸಾಂಪ್ರದಾಯಿಕ ವರ್ಣನೆಗಳಿಂದ ಶೋಭಿಸಿದೆ. ರಾಜನೀತಿಯ ಪ್ರಸ್ತಾಪ, ಮಂತ್ರಾಲೋಚನೆ, ಹಿತಬೋಧನೆ, ಮಂತ್ರೋಪದೇಶ ಮೊದಲಾಗಿ ನಾನಾ ಹಂತಗಳು ರಸವತ್ತಾಗಿ ವಿವರಿತವಾಗಿವೆ.

ಕಾವ್ಯಾರಂಭದಲ್ಲಿ ರಾಜ್ಯಾಧಿಕಾರ ತತ್ತ್ವವನ್ನು ಬಹಳ ಸ್ಪಷ್ಟವಾಗಿ ನಿರೂಪಿಸಿದ್ದಾನೆ. ರಾಜನು ಪ್ರಜೆಗಳ ವಿಷಯದಲ್ಲಿ ಸದ್ಭಾವನೆಯಿಂದ ವರ್ತಿಸಿದರೆ ಆ ವರ್ತನೆಯೆ ರಾಜ್ಯಾಧಿಕಾರವನ್ನು ಉಳಿಸುವುದು. ವಿಪರೀತ

ವರ್ತನ ಅಧಿಕಾರವನ್ನು ಅಳಿಸುವುದು. ರಾಜ್ಯಾಧಿಕಾರದ ಭದ್ರತೆಗೆ ಪ್ರಜೆಗಳೇ ಮೂಲವೆಂಬ ವಿಷಯ ಎಲ್ಲಕಾಲಕ್ಕೂ ಎಷ್ಟು ಪ್ರಸ್ತುತ.

## ನೈಷಧೀಯ ಚರಿತ

ಶ್ರೀ ಹರ್ಷ ಕವಿಯು ಇದನ್ನು ರಚಿಸಿದ್ದಾನೆ. ಈತನು ತರ್ಕ ವೇದಾಂತಾದಿ ಶಾಸ್ತ್ರಗಳಲ್ಲಿ ಉದ್ದಾಮ ಪಂಡಿತ. ಪ್ರಜ್ಞಾಪೂರ್ವಕ ಪ್ರೌಢ ಕವಿಯೆಂದು ಕೊಂಡಾಡಲ್ಪಟ್ಟಿದ್ದಾನೆ. 22 ಸರ್ಗಗಳು, 2804 ಶ್ಲೋಕಗಳಿಂದ ಉಪಲಬ್ಧವಿದೆ.

ನೈಷಧಕ್ಕೆ ಸುಮಾರು 30 ವ್ಯಾಖ್ಯಾನಗಳು ದೊರಕಿವೆ.

ವಿದರ್ಭ ದೇಶದ ಭೀಮನ ಕುಮಾರಿ ದಮಯಂತಿಗೂ ನಿಷಧ ರಾಜನಾದ ನಳನಿಗೂ ಸ್ವಯಂವರ ವಿಧಾನದಿಂದ ನಡೆದ ವಿವಾಹವು ಈ ಕಾವ್ಯದ ಕಥಾವಸ್ತು. ಇಬ್ಬರ ನಡುವೆ ದೂತಪಾತ್ರವನ್ನು ರಾಜಹಂಸವು ವಹಿಸುತ್ತದೆ. ಸ್ವಯಂವರದಲ್ಲಿ ಸಾಕ್ಷಾತ್ ಸರಸ್ವತಿಯೇ ದಮಯಂತಿಗೆ ರಾಜರ ಪರಿಚಯವನ್ನು ಮಾಡಿಸುತ್ತಾಳೆ. ಇಂದ್ರ, ಅಗ್ನಿ, ಯಮ, ವರುಣರು ದಮಯಂತಿಯಲ್ಲಿ ಅನುರಕ್ತರಾಗಿ ನಳನ ರೂಪದಲ್ಲಿ ಆಸೀನರಾಗಿರುತ್ತಾರೆ. ಪಕ್ಕದಲ್ಲಿ ನಳನು ಉಪಸ್ಥಿತನಾಗಿರುತ್ತಾನೆ. ಶ್ಲೇಷೋಕ್ತಿಯಿಂದ ಸರಸ್ವತಿಯು ಐದು ನಳ ರೂಪರನ್ನು ವಿಶ್ಲೇಷಿಸುತ್ತಾಳೆ. ಆಗ ದಮಯಂತಿಗೆ ನಿಜವಾದ ನಳನು ಯಾರೆಂದು ತಿಳಿದು ವರಿಸುತ್ತಾಳೆ. ಈ ವೃತ್ತಾಂತವನ್ನು ತಿಳಿದು ಕಲಿ ಪುರುಷನು ಅಸೂಯೆಯಿಂದ ನಳನನ್ನು ಪೀಡಿಸುತ್ತಾನೆ. ನಳ ದಮಯಂತಿಯರ ಏಕಾಂತ ವಿಹಾರ, ನಳನ ದಿನಚರ್ಯೆ ಮೊದಲಾದ ವಿಷಯಗಳು ಮನೋಜ್ಞವಾಗಿ ವರ್ಣಿತವಾಗಿವೆ.

ಕಥಾ ವಸ್ತುವಿನ ಮೂಲಕ ಆನಂದಭರಿತ ಜೀವನಕ್ಕೆ ಬೇಕಾಗುವ ನೀತಿ ನಿಯಮಗಳನ್ನು ರೂಪಿಸಿ ತಿಳಿಸುವುದು, ಪ್ರಕೃತಿಯಲ್ಲಿರುವ ನಾನಾ ವಿಷಯಗಳನ್ನು ಅವುಗಳ ರಹಸ್ಯವನ್ನು ಬಹಳ ಸುಂದರವಾಗಿ, ಕಲಾತ್ಮಕವಾಗಿ ವರ್ಣಿಸಿ ಅವುಗಳ ಪರಿಚಯವನ್ನು ಸಾಮಾನ್ಯರಾದಿಯಾಗಿ ಎಲ್ಲರಿಗೂ ತಿಳಿಸಬೇಕೆಂಬ ಧ್ಯೇಯದೊಂದಿಗೆ ವರ್ಣಿಸಿರುವುದು, ಸುಂದರ ಸೊಬಗಿನ ಬದುಕನ್ನು ಹೊಂದಲು ಬೇಕಾದ ಸಲಕರಣೆಯನ್ನು ರೂಪಾಂತರಗಳಲ್ಲಿ ಪ್ರಕಟಿಸಿರುವುದು, ಅದರೊಟ್ಟಿಗೆ ಜಗದ ವಿಷಯಗಳನ್ನು ಪರಿಚಯಿಸಿ ಕೊಟ್ಟಿರುವುದೇ ಕಾವ್ಯಗಳ ವೈಶಿಷ್ಟ್ಯ. ಹೀಗೆ ನಾನಾ ಪ್ರಕಾರ ಪುಣ್ಯವಿಶೇಷ, ವಿಷಯಗಳ ಪರಿಚಯ, ಯಾರಿಗೆ ತಾನೆ ಬೇಡವೆನಿಸುತ್ತದೆ....

**ಮಂಗಳಮ್**

# ವೇದ

ವೇದರಾಶಿಯನ್ನು ಅನುಕೂಲವಾಗಿ ಅಭ್ಯಾಸ ಮಾಡಲು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದವೆಂದು ನಾಲ್ಕಾಗಿ ವಿಂಗಡಿಸಿ ಕೃಷ್ಣದ್ವೈಪಾಯನರು ವ್ಯಾಸರಾದರು. ಸಪ್ತಕೋಟಿ ಮಂತ್ರಗಳಲ್ಲಿ ಪ್ರಸ್ತುತ ಉಪಲಬ್ಧವಿರುವುದು ಕೇವಲ ಇಪ್ಪತ್ತು ಸಾವಿರ ಮಂತ್ರಗಳು. ಎರಡು ಸಾವಿರ ವರ್ಷಗಳ ಹಿಂದಿದ್ದ ಪತಂಜಲಿಗಳ ಪ್ರಕಾರ ಅಂದು 1180 ಶಾಖೆಗಳಿದ್ದವು. ಇಂದು ಕೇವಲ 10 ಶಾಖೆಗಳಷ್ಟೇ ಉಳಿದಿವೆ. ಇದರಲ್ಲೂ ಕೆಲವು ಅಳಿವಿನ ಹಾದಿಯಲ್ಲಿದೆ. ಅಮೂಲ್ಯ ಜ್ಞಾನ ಉಳಿಸಿಕೊಳ್ಳಬೇಕಾದ ಕರ್ತವ್ಯಯಾರದ್ದು? ಪ್ರಸ್ತುತ ಇರುವುದನ್ನು ಅರ್ಥೈಸಿಕೊಳ್ಳಲು ನಮಗೆ ವ್ಯವಧಾನವಿಲ್ಲ. ವೇದದ ಇಂಪು, ಕಂಪು, ಸೊಂಪಾಗಿ ತಂಪಿರಲು ಪಣತೊಡುವ ನಾವೆಲ್ಲರೂ ಎಂದೆಂದು. ನಾಲ್ಕು ವೇದಗಳ ಬಗ್ಗೆ ತಿಳಿಯೋಣ.

ಜ್ಞಾನಾತ್ಮಕ ವಿಷಯಂಗಳ ಪ್ರಸಾರದಿ
ಆಧ್ಯಾತ್ಮಿಕ ಆದಿದೈವಿಕ ಆದಿಭೌತಿಕಾದಿ
ವಿಚಾರಂಗಳ ವಿಸ್ತರಿಸಿ ವಿವಿಧ ಸ್ಥರದಿ
ನಿಬದ್ಧ ಛಂದೋ ಮಂತ್ರಗಳೇ ಋಗ್ವೇದ ||

ಯಜ್ಞಶಸ್ತ್ರಗಳನ್ನುಚ್ಚರಿಸುವ ಹೋತೃಗಣ
ಲೋಕಕ್ಕೆ ತಿಳಿವನ್ನರುಹುವ ಬಹು ಮಂತ್ರಸೂಕ್ತ
ವಿಶೇಷಣಗಳು ಮೇಳೈಸಿಹ ಮಹೋದಧಿ
ವಿವಿಧ ಪ್ರಭೆಯಿಂ ಪ್ರಜ್ವಲಿಸುತಿಹುದೇ ಋಗ್ವೇದ ॥

ಕರ್ಮಮಾರ್ಗದ ಕೈದೀಪವಿದು
ಯಜ್ಞದ ನಡೆನುಡಿಯ ಬೆಳೆಸಿಹುದು
ಗದ್ಯ ಪದ್ಯಮಿಶ್ರ ಮಂತ್ರ ಸಮೂಹವಿದು
ಕರ್ಮಸುಬದ್ಧತೆಯಿಂ ಕೈವಲ್ಯ ತೋರ್ಪುದು ॥

ಶುಕ್ಲ ಕೃಷ್ಣಂಬೆರಡು ಭೇದದಿ
ಉದಾತ್ತಾನುದಾತ್ತ ಸ್ವರಿತ ಸ್ವರಸಮೂಹದಿ
ಯಜ್ಞ ಪ್ರಕ್ರಿಯೆಗಳ ಸಾಧಿಸಿ ಸವನದಿ
ಮಾರ್ದನಿಪ ಮಹೋದರವೀ ಯಜುರ್ವೇದ ॥

ಆಹ್ವಾನಿತ ದೇವಂಗಳಿಗೆ ರಸಾನಂದವನುಣಿಸಿ
ಪ್ರಸನ್ನಿಸಿ ಸುಪ್ರಸಾದವ ನೀಡಲು ಮುದದಿ
ಶ್ರುತಿಸ್ವರ ತಾಳ ನಿಬದ್ಧ ಗಾನಮಾಧುರ್ಯದಿ
ನಾನಾ ಪ್ರಕಾರ ಸ್ವರ ಮೇಳೈಸಿಹುದೇ ಸಾಮವೇದ ॥

ಸಪ್ತಸ್ವರಾದಿ ಸ್ವರ ಮಂಡಲಾಲಂ ಕೃತವು
ಸಹಸ್ರ ಶಾಖೆಗಳಿಂದುಪ ಶೋಭಿತವು
ಸಮಾನ ಮನಸ್ಥಿತಿಯ ಸಾಧನೆಗೆ ಸಾಧ್ಯವು
ಸರ್ವಯಜ್ಞಕ್ಕೆ ಸಾರವೂ ಆಧಾರವೂ ||

ಅಜ್ಞಾನ ನಿವಾರಿಸಿ ವಿಚಾರಂಗಳ ಪಸರಿಸಿ
ಭೌತಿಕ ಜಗತ್ತಿನ ಮಜಲುಗಳಂ ವಿಸ್ತರಿಸಿ
ವೈಜ್ಞಾನಿಕ ನಡೆಯಂ ವೈದೀಕ ಮಾರ್ಗದಿ ನುಡಿಸಿ
ಲೋಕಾಶ್ರಯಭೂತವಿದು ಅಥರ್ವಣವೇದ ||

ಬ್ರಹ್ಮಗಣದ ಕರ್ತವ್ಯವಂ ನಿರೂಪಿಸಿ
ಬಿಷಕ್ ಭೇದಗಳ ಬಿಸಿಗದಿರ ಬಿಡಿಸಿ
ಜಗತೀತಲ ಜನಜನಿತ ಜಾಡೆಲ್ಲವಂ ಜಸಿಸಿ
ಜನ ಕಲ್ಯಾಣಕ್ಕೆ ಜಾಗೃತಿಯ ಜಾನವೀ ಅಥರ್ವಣಿ ||

**ರಚನೆಃ ವಿದ್ವಾನ್ ಕೆ. ಆರ್. ಮಂಜುನಾಥ ಶ್ರೌತಿ**